# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 132 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 23.11.2024 • ಶನಿವಾರ • ಪುಟ:04 • ಬೆಲೆ:2


Volume:02 • Issue: 132 • PRGI No:KARKAN/2023/88055 • VIJAYANAGARA • 23.11.2024 • Saturday • Page:04 • Rs:2



HAMPI TIMES
No.1 Leading District News Paper
1,00,000
E-PAPER READERS
NEWS PAPER ADVT - THE BEST ADVERTISING PLATFORM TO BOOST YOUR BUSINESS
for More Information Call us
94486 33038




## ಆನಂದ ಬಾಣ




## ಮೈಕ್ರೋ ನ್ಯೂಸ್

### ಡಿ.15 ಅಂಜುಮನ್ ಎ ಖಿದ್ಮತ್ ಎ ಇಸ್ಲಾಂ ವಕ್ಫ್ ಸಂಸ್ಥೆಯ ಕಾರ್ಯಕಾರಿ ಸಮಿತಿಗೆ ಚುನಾವಣೆ

**ಹಂಪಿ ಟೈಮ್ಸ್ ಕಂಪ್ಲಿ**

ಕಂಪ್ಲಿ ಪಟ್ಟಣದ ಅಂಜುಮನ್ ಎ ಖಿದ್ಮತ್ ಎ ಇಸ್ಲಾಂ ವಕ್ಫ್ ಸಂಸ್ಥೆಗೆ ಚುನಾವಣಾ ಪ್ರಕ್ರಿಯೆಯು ನ.23 ರಿಂದ ಡಿ.15 ರವರೆಗೆ ನಡೆಯಲಿದೆ ಎಂದು ಕಲಬುರಗಿ ವಿಭಾಗದ ವಕ್ಫ್ ಸಂಸ್ಥೆಯ ವಿಭಾಗೀಯ ಅಧಿಕಾರಿ ಹಾಗೂ ಚುನಾವಣಾಧಿಕಾರಿ ನೂರ್ ಪಾಷಾ ಅವರು ತಿಳಿಸಿದ್ದಾರೆ.

ಶುಕ್ರವಾರ ಈ ಸಂಸ್ಥೆಗೆ ಹೊಸ ಸಮಿತಿ ರಚಿಸುವ ನಿಮಿತ್ತ ಸದಸ್ಯರ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಚುನಾವಣಾ ನಾಮಪತ್ರವನ್ನು ನ.25 ರ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 03 ಗಂಟೆಯವರೆಗೆ ಇದೇ ಕಚೇರಿಯಿಂದ ಪಡೆದು ಭರ್ತಿ ಮಾಡಿ, ಸೂಕ್ತ ದಾಖಲೆಗಳೊಂದಿಗೆ ಡಿ.02 ರ ಮಧ್ಯಾಹ್ನ 03 ಗಂಟೆಯ ಒಳಗೆ ಸಲ್ಲಿಸಬೇಕು.

ನಾಮಪತ್ರ ಪರಿಶೀಲನೆ ಡಿ.03 ರಂದು ಬೆಳಿಗ್ಗೆ 11.30 ಗಂಟೆಯಿಂದ ನಡೆಯುತ್ತದೆ, ನಾಮಪತ್ರ ಹಿಂದಕ್ಕೆ ಪಡೆಯಲು ಡಿ.04 ರ ಮಧ್ಯಾಹ್ನ 03 ಗಂಟೆಯವರೆಗೆ ಅವಕಾಶ ಇರುತ್ತದೆ ಹಾಗೂ ಅದೇ ದಿನ ಮಧ್ಯಾಹ್ನ 03.30 ಗಂಟೆಯ ನಂತರ ಚುನಾವಣಾ ಚಿನ್ಹೆಗಳ ಹಂಚಿಕೆ ಮಾಡಿ ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಿಸಲಾಗುತ್ತದೆ.

ಡಿ.15 ರ ಭಾನುವಾರ ಬೆಳಿಗ್ಗೆ 08 ಗಂಟೆಯಿಂದ ಮಧ್ಯಾಹ್ನ 03 ಗಂಟೆಯವರೆಗೆ ಕಂಪ್ಲಿ ಪಟ್ಟಣದ ಎಸ್‌ಜಿವಿಎಸ್‌ಎಸ್ ಬಾಲಕಿಯರ ಸರ್ಕಾರಿ ಕಾಲೇಜಿನಲ್ಲಿ ಚುನಾವಣೆ ನಡೆಯಲಿದ್ದು, ಅದೇ ದಿನ ಸಂಜೆ 04 ಗಂಟೆಯಿಂದ ಮತ ಎಣಿಕೆ ಕಾರ್ಯ ನಡೆಯಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಕಡಿಮೆ ಖರ್ಚು ಅಧಿಕ ಲಾಭ!
ಮಕ್ಕಳ ಜ್ಞಾನಭಂಡಾರ ಹೆಚ್ಚಿಸಲು
ಇರಲಿ ಮನೆಗೊಂದು ದಿನಪತ್ರಿಕೆ
ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ ಪ್ರಯೋಜನೆಗಳು
ಭಾಷಾ ಕೌಶಲ್ಯ ಸುಧಾರಣೆ
ಸಾಮಾನ್ಯ ಜ್ಞಾನ ಹೆಚ್ಚಳ
ನೈತಿಕ ಮತ್ತು ಸಾಮಾಜಿಕ ಅರಿವು
ಮೊಬೈಲಿನಿಂದ ದೂರವಿರುವುದು
ಓದುವ ಹವ್ಯಾಸಕ್ಕೆ ಅಡಿಪಾಯ
ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ
99029 09399, 99805 59681
97407 42251, 80735 89125


# ಕೋಟಿ ಕೋಟಿ ಹಣ ಕರುಣಿಸುವ ಶ್ರೀ ಕೊಟ್ಟೂರೇಶ್ವರಗಿಲ್ಲ ಬೆಳ್ಳಿ ಬಾಗಿಲು

## ಟೆಂಡರ್, ಸಾಗುವಾನಿ ಕಟ್ಟಿಗೆ ನೆಪದಲ್ಲಿ ಕಾಮಗಾರಿ ನೆನೆಗುದಿಗೆ | ಭಕ್ತರ ಬೇಡಿಕೆ ಈಡೇರಿಸುವುದೆಂದು?

## ದರ್ಶನಕ್ಕಾಗಿ ಸಾಲುಗಟ್ಟಿನಿಂತ ಭಕ್ತರಿಗಿಲ್ಲ ನೆರಳು | ದೇವರ ಧ್ಯಾನ ಕಸಿದ ಆಡಳಿತ ವ್ಯವಸ್ಥೆ | ಭಕ್ತರು ಆಕ್ರೋಶ

## ಇತ್ತೀಚೆಗೆ 7 ತಿಂಗಳಲ್ಲಿ 65 ಲಕ್ಷ ರೂ. ಹುಂಡಿಯಲ್ಲಿ ಸಂಗ್ರಹ | ವರ್ಷಕ್ಕೆ ಅಂದಾಜು ಕೋಟಿ ರೂ

**ಬಂದಾತರ ಪ್ರಕಾಶ ಕೊಟ್ಟೂರು**

ನಾಡಿನ ಲಕ್ಷಾಂತರ ಭಕ್ತರ ಆರಾಧ್ಯ ದೈವ ಕೊಟ್ಟೂರಿನ ಶ್ರೀ ಗುರುಕೊಟ್ಟೂರೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ದರ್ಶನ ಪಡೆದ ಭಕ್ತರು, ತಮ್ಮ ಹರಕೆ ಹಾಗೂ ಭಕ್ತಿ ಸೇವೆಯಾಗಿ ದೇವಸ್ಥಾನದ ಅಭಿವೃದ್ಧಿಗೆ ಹುಂಡಿಯಲ್ಲಿ ಕಾಣಿಕೆ ಹಾಕುತ್ತಾರೆ. ವರ್ಷಕ್ಕೆ ಕೋಟಿ ರೂ. ಗೂ ಅಧಿಕ ಕಾಣಿಕೆ ಸಂಗ್ರಹವಾಗುತ್ತಿದ್ದರೂ, ದೇವಸ್ಥಾನದ ಹೆಬ್ಬಾಗಿಲಿಗೆ ಬೆಳ್ಳಿ ಕವಚ ನಿರ್ಮಾಣ ಮತ್ತು ದರ್ಶನಕ್ಕೆ ಸಾಲುಗಟ್ಟಿ ನಿಲ್ಲುವ ಭಕ್ತರಿಗೆ ನೆರಳು ನಿರ್ಮಿಸಲು ಮುಂದಾಗದ ಸಂಬಂಧಿಸಿದ ಧಾರ್ಮಿಕ ದತ್ತಿ ಇಲಾಖೆ ಅಧಿಕಾರಿಗಳು ಹಾಗೂ ಆಡಳಿತ ವ್ಯವಸ್ಥೆ ವಿರುದ್ಧ ಭಕ್ತರು ಅಕ್ರೋಶ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ಅಸಂಖ್ಯಾತ ಭಕ್ತರ ಆರಾಧ್ಯದೈವ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ಬೆಳ್ಳಿ ಬಾಗಿಲು ನಿರ್ಮಾಣ ಕಾರ್ಯ ನೆನಗುದಿಗೆ ಬಿದ್ದಿರುವುದು ಧಾರ್ಮಿಕ ದತ್ತಿ ಇಲಾಖೆ ಅಧಿಕಾರಿಗಳ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿ ಯಾಗಿದೆ. 2019 ಸೆಪ್ಟೆಂಬರ್ 20 ರಂದು ಹುಂಡಿ ಪೆಟ್ಟಿಗೆ ಎಣಿಕೆ ದಿನದಂದು ಬೆಳ್ಳಿ ಬಾಗಿಲು ನಿರ್ಮಾಣಕ್ಕೆ ರಾಜ್ಯ ಧಾರ್ಮಿಕ ದತ್ತಿ ಇಲಾಖೆಗೆ ಪ್ರಸ್ತಾವನೆ ಕಳಿಸಲಾಗಿದೆ ಎಂದು ಅಂದಿನ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಾಶರಾವ್ ತಿಳಿಸಿದ್ದರು.

ಶ್ರೀ ಸ್ವಾಮಿಯ ದೇವಸ್ಥಾನಕ್ಕೆ ಬೆಳ್ಳಿ ಬಾಗಿಲು ನಿರ್ಮಾಣ ಸುದ್ದಿ ತಿಳಿದ ಭಕ್ತರು ಹರ್ಷಗೊಂಡಿದ್ದರು. ಹಲವು ದಿನಗಳ ಕನಸು, ಭಕ್ತರ ಬೇಡಿಕೆ ಈಡೇರಲಿದೆ ಎಂದು ದಿನಗಣನೆಯಲ್ಲಿ ಭಕ್ತರು ತೊಡಗಿದರು. ಆಡಳಿತಾತ್ಮಕ ಅಡಚಣೆಯೋ ಅಥವಾ ಅಧಿಕಾರಿಗಳ ಬೇಜವಾಬ್ದಾರಿತನವೋ ಭಕ್ತರ ಕನಸು ಬೆಳ್ಳಿ ಬಾಗಿಲು ನಿರ್ಮಾಣ ಇಂದಿಗೂ ಕನಸಾಗಿಯೇ ಉಳಿದಿದೆ.

ಈ ದೇವಸ್ಥಾನದ ಧಾರ್ಮಿಕ ದತ್ತಿ ಇಲಾಖೆ ಇಒ ಆಗಿದ್ದ ಪ್ರಕಾಶ್‌ರಾವ್ ನಂತರ ಗಂಗಾಧರಪ್ಪ, ಕೃಷ್ಣಪ್ಪ ಹಾಗೂ ಶಾಂತಮ್ಮ ಅಧಿಕಾರಿಗಳು ಇಲ್ಲಿ ಆಡಳಿತ ನಡೆಸಿದ್ದಾರೆ, ಅಧಿಕಾರಿಗಳು ಬದಲಾಗುತ್ತಿದ್ದಾರೆಯೇ ಹೊರತು ಕಾರ್ಯಾರಂಭಗೊಂಡಿಲ್ಲ. ಮಲ್ಲಪ್ಪ ಎನ್ನುವವರು ಕೆಲವು ದಿನಗಳು ಮಾತ್ರ ಅಧಿಕಾರದಲ್ಲಿದ್ದರು, ಪ್ರಸ್ತುತ ಹನುಮಂತಪ್ಪ ಅವರು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದಾರೆ. ಇವರಾದ್ರು ಇಚ್ಛಾಶಕ್ತಿ ತೋರಿ ಜಿಲ್ಲಾಧಿಕಾರಿಗಳ ಮಾರ್ಗದರ್ಶನದೊಂದಿಗೆ ಡಿಸೆಂಬರ್ ತಿಂಗಳಲ್ಲಿ ಜರುಗುವ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಕಾರ್ತಿಕೋತ್ಸವ ದಂದು ಬೆಳ್ಳಿ ಬಾಗಿಲನ್ನು ಭಕ್ತರು ಕಣ್ತುಂಬಿ ಕೊಳ್ಳುವಂತೆ ಕಾರ್ಯ ನಿರ್ವಹಿಸಲಿ ಎಂಬುದು ಭಕ್ತರ ಒತ್ತಾಯವಾಗಿದೆ.



> ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ದೇವ ಸ್ಥಾನದ ಭಕ್ತರ ಕಾಣಿಕೆ ಹುಂಡಿ ಪೆಟ್ಟಿಗೆಯಲ್ಲಿ ವಾರ್ಷಿಕ ಅಂದಾಜು 1 ಕೋಟಿ ರೂ.ಗೂ ಹೆಚ್ಚು ಸಂಗ್ರಹವಾಗುತ್ತದೆ. ಇಲ್ಲಿಯ ದೇವಸ್ಥಾನಕ್ಕೆ ಬೆಳ್ಳಿ ಬಾಗಿಲು ನಿರ್ಮಾಣಕ್ಕೆ ಭಕ್ತರು 5 ವರ್ಷ ಕಾಯಬೇಕೆ? ಅಧಿಕಾರಿಗಳು ಶೀಘ್ರ ಬೆಳ್ಳಿ ಬಾಗಿಲು ನಿರ್ಮಿಸಿ ಭಕ್ತರ ಬೇಡಿಕೆ ಈಡೇರಿಸಬೇಕು.
>
> – **ಹುಳ್ಳಿ ಪ್ರಕಾಶ್**, ಭಕ್ತರು, ಇಟಿಗಿ ಗ್ರಾಮ.

> ಇತ್ತೀಚಿನ ಹುಂಡಿ ಎಣಿಕೆಯಲ್ಲಿ ಶ್ರೀ ಸ್ವಾಮಿಯ ದೇವಸ್ಥಾನದ ಹುಂಡಿಯಲ್ಲಿ 7 ತಿಂಗಳಲ್ಲಿ 65 ಲಕ್ಷ ರೂ. ಸಂಗ್ರಹವಾಗಿದೆ. ಈ ಹಿಂದಿನ ಹಣವೂ ಇದೆ. ಇಷ್ಟೆಲ್ಲಾ ಹಣ ಸಂಗ್ರಹ ಇದ್ದರೂ ದೇವಸ್ಥಾನದ ಬಲಭಾಗ ದಕ್ಷಿಣಕ್ಕೆ ಸಾಲುಗಟ್ಟಿ ನಿಲ್ಲುವ ಭಕ್ತರಿಗೆ ನೆರಳು ಕಲ್ಪಿಸುವ ಶೆಲ್ಟರ್ ನಿರ್ಮಾಣ ಕಾಮಗಾರಿ ನೆನಗುದಿಗೆ ಬಿದ್ದಿದೆ. ಭಕ್ತರು ಬಿಸಿಲಿನಲ್ಲಿ ನಿಲ್ಲದಂತಾಗಲಿ. ಮೂಲಭೂತ ಸೌಲಭ್ಯ ಒದಗಿಸಲಿ.
>
> – **ವಿಶ್ವನಾಥ**, ಭಕ್ತರು.

> ಶ್ರೀ ಸ್ವಾಮಿಯ ದೇವಸ್ಥಾನದ ಬೆಳ್ಳಿ ಬಾಗಿಲು ನಿರ್ಮಾಣಕ್ಕೆ ಬೆಳ್ಳಿ ಪಟ್ಟಿ ಅಳವಡಿಕೆಗೆ ಸಾಗುವನೆ ಕಟ್ಟಿಗೆ ಅವಶ್ಯಕತೆ ಇದ್ದು, ಈ ಬಗ್ಗೆ ಟೆಂಡರ್ ಆಗಿದೆ. ಟೆಂಡರ್ ಪೂರ್ಣಗೊಂಡ ನಂತರ ಬೆಳ್ಳಿ ಬಾಗಿಲು ನಿರ್ಮಾಣ, ಭಕ್ತರಿಗೆ ನೆರಳು ವ್ಯವಸ್ಥೆಗೆ ಶೆಲ್ಟರ್ ನಿರ್ಮಾಣ, ಗೋಪುರಕ್ಕೆ ಕಳಸರೋಹಣ ಹಾಗೂ ದೇವಸ್ಥಾನದ ತೇರು ಬಯಲು ಪ್ರದೇಶ ಸಿಸಿ ರಸ್ತೆ 2 ಕೋಟಿ.ರೂ ವೆಚ್ಚದಲ್ಲಿ ನಿರ್ಮಿಸುವ ಕಾರ್ಯ ಶೀಘ್ರದಲ್ಲಿ ಒಟ್ಟಿಗೆ ನೆರವೇರಲಿವೆ.
>
> – **ಹೆಚ್.ಗಂಗಾಧರಪ್ಪ**, ಸಹಾಯಕ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ. ಬಳ್ಳಾರಿ.

# ದಾಳಿಂಬೆ ತುಂಬಿದ ವಾಹನಪಲ್ಟಿ ಹಣ್ಣಿಗಾಗಿ ಮುಗಿಬಿದ್ದ ಜನ

## ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ಟೈರ್ ಸಿಡಿದು ಪಲ್ಟಿ | ರೈತನ ಹಣ್ಣು ಕದಿಯದೆ ಹಿಂದಿರುಗಿಸಿ ಎಂದ ಶಾಸಕ ಡಾ.ಎನ್.ಟಿ.ಶ್ರೀನಿವಾಸ

**ಹಂಪಿ ಟೈಮ್ಸ್ ಕೂಡ್ಲಿಗಿ**

ದಾಳಿಂಬೆ ಹಣ್ಣು ತುಂಬಿಕೊಂಡು ಹೋಗುತ್ತಿದ್ದ ಬೊಲೋರ್ ವಾಹನ ಪಲ್ಟಿಯಾದ ಘಟನೆ ಬಣವಿ ಕಲ್ಲು ಗ್ರಾಮದ ಹೊರವಲಯದ ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ಗುರುವಾರ ಸಂಜೆ ಜರುಗಿದೆ.

ಹೆಚ್.ಬಿ.ಹಳ್ಳಿಯಿಂದ ದಾಳಿಂಬೆ ಹಣ್ಣನ್ನು ಬೋಲೋರ್ ವಾಹನದಲ್ಲಿ ತುಂಬಿಕೊಂಡು ಬೆಂಗಳೂರು ಮಾರ್ಗ ವಾಗಿ ಚೆನ್ನೈಗೆ ಹೋಗಬೇಕಾದ ಬೋಲರ್ ವಾಹನ ಬಣವಿಕಲ್ಲು ಗ್ರಾಮದ ಹೊರವಲಯದ ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ವಾಹನದ ಹಿಂದಿನ ಟೈರ್ ಒಮ್ಮೆಲೆ ಸಿಡಿದು ಹೋಗಿದ್ದರಿಂದ ವಾಹನ ಪಲ್ಟಿಯಾಗಿತ್ತು ವಾಹನದಲ್ಲಿನ ದಾಳಿಂಬೆ ಹಣ್ಣನ್ನು ತುಂಬಿದ ಡಬ್ಬಗಳು ಗಾಡಿ ಯಿಂದ ಕೆಳಗೆ ಬಿದ್ದು ಚೆಲ್ಲಪಲ್ಲಿಯಾಗಿದ್ದ ಕೆಲವು ಡಬ್ಬಗಳಲ್ಲಿ ಇದ್ದ ದಾಳಿಂಬೆ ಹಣ್ಣುಗಳು ಹಾಳಾಗಿ ಹೋಗಿದ್ದವು. ದಾಳಿಂಬೆ ಹಣ್ಣಿಗಾಗಿ ಕೆಲವು ಜನರು ಮುಗಿಬಿದ್ದಿದ್ದರು. ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಹೆದ್ದಾರಿಯ ಪೊಲೀಸರು ವಿಷಯ ಗೊತ್ತಾಗುತ್ತಿದ್ದಂತೆ ತಕ್ಷಣ ಸ್ಥಳಕ್ಕೆ ಧಾವಿಸಿ ರಕ್ಷಣೆ ನೀಡಿದರು.



ದಾಳಿಂಬೆ ಹಣ್ಣಿಗೆ ಕೆಲವು ಜನರು ಮುಗಿಬಿದ್ದಿದ್ದರು ಸ್ಥಳಕ್ಕೆ ಹೆದ್ದಾರಿ ಪೊಲೀಸರು, ಭಾವಿಸಿ ರಕ್ಷಣೆ ನೀಡಿದರು. ಇದೇ ಮಾರ್ಗದಲ್ಲಿ ಕೂಡ್ಲಿಗಿ ಶಾಸಕ ಡಾ. ಶ್ರೀನಿವಾಸ್ ಎನ್ ಟಿ ರವರು ತಮ್ಮ ವಾಹನದಲ್ಲಿ ಸಂಚರಿಸುತ್ತಿರುವಾಗ ಈ ಘಟನೆಯನ್ನು ನೋಡಿ ತಕ್ಷಣ ಗಾಡಿ ನಿಲ್ಲಿಸಿ ಬೋಲರ್ ವಾಹನ ಪಲ್ಟಿಯಾದ ಸ್ಥಳಕ್ಕೆ ದಾವಿಸಿದರು. ನಂತರ ಶಾಸಕರು ಮಾತನಾಡಿ ರೈತರು ತಮ್ಮ ಜಮೀನುಗಳಲ್ಲಿ ಕಷ್ಟಪಟ್ಟು ಬೆವರು ಸುರಿಸಿ ಬೆಳೆದ ಈ ದಾಳಿಂಬೆ ಹಣ್ಣುಗಳನ್ನು ಯಾರು ಕದ್ದು ತೆಗೆದುಕೊಂಡು ಹೋಗಬಾರದು ತೆಗೆದುಕೊಂಡವರು ವಾಪಸ್ ಹಣ್ಣಿನ ಮಾಲೀಕರಿಗೆ ಕೊಡಿ ಎಂದು ತಿಳಿ ಹೇಳಿದರು.

ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ತೊಂದರೆಯಾಗದಂತೆ ವ್ಯವಸ್ಥೆ ಮಾಡಬೇಕು ಎಂದು ಹೆದ್ದಾರಿ ಪೊಲೀಸರಿಗೆ ಹೇಳಿ ಅಲ್ಲಿಂದ ಶಾಸಕರು ತೆರಳಿದರು

# ನಿಂಬಳಗೇರೆ ಗ್ರಾಮದಲ್ಲಿ ಉಜ್ಜಯಿನಿ ಶ್ರೀಗಳಿಂದ ಎಟಿಎಂ ಉದ್ಘಾಟನೆ



**ಹಂಪಿ ಟೈಮ್ಸ್ ಕೊಟ್ಟೂರು.**

ರೈತರಿಗಾಗಿ ಬ್ಯಾಂಕುಗಳಿಂದ ಅನೇಕ ಯೋಜನೆ ಗಳು ಲಭ್ಯವಾಗುತ್ತವೆ. ಇವುಗಳ ಪ್ರಯೋಜವನ್ನು ಪ್ರತಿ ಗ್ರಹಕರು ಪಡೆಯಬೇಕು ಎಂದು ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿ ಆಶೀರ್ವಚನ ನೀಡಿದರು.

ತಾಲೂಕಿನ ನಿಂಬಳಗೇರೆ ಗ್ರಾಮದಲ್ಲಿ ಶುಕ್ರವಾರ ಭಾರತೀಯ ಸ್ಟೇಟ್ ಬ್ಯಾಂಕ್‌ನ ಎಟಿಎಂ ಮಿಷನ್ ಉದ್ಘಾಟಿಸಿ ಮಾತನಾಡಿದರು. ಬ್ಯಾಂಕುಗಳಿಂದ ಪಡೆದ ಸಾಲವನ್ನು ಸಕಾಲದಲ್ಲಿ ಪಾವತಿ ಮಾಡಬೇಕು. ಸಣ್ಣ ಗ್ರಾಮದಲ್ಲಿ ಸ್ಟೇಟ್ ಬ್ಯಾಂಕ್ ವತಿಯಿಂದ ಎಟಿಎಂ ಸ್ಥಾಪನೆ ಮಾಡಿರುವುದು ಸ್ಥಳೀಯರು ಸೇರಿದಂತೆ ಸುತ್ತ ಮುತ್ತ ಜನರಿಗೆ ಹೆಚ್ಚು ಅನುಕೂಲವಾಗಲಿದೆ. ಸದ್ಧರ್ಮ ಪೀಠ ಇರುವ ಉಜ್ಜನಿಯಲ್ಲಿ ಬ್ಯಾಂಕ್ ನೊಂದಿಗೆ, ಎಟಿಎಂ ಆರಂಭ ಮಾಡಿದರೆ ಭಕ್ತರಿಗೆ ಅನುಕೂಲವಾಗಲಿದೆ ಎಂದರು. ಹೇಳಿದರು.

ಬಳ್ಳಾರಿ ಮುಖ್ಯ ವ್ಯವಸ್ಥಾಪಕರು ಇರ್ಷಾದ್ ಅಲಾಮ್ ಮಾತನಾಡಿ, ನಿಮ್ಮ ಮೊಬೈಲೆಗೆ ಬರುವ ಯಾವುದೇ ಅನುಮಾನಸ್ಪದ ಲಿಂಕ್‌ಗಳನ್ನು ತೆರೆಯಬೇಡಿ, ತಿಳಿಯದ ಸ್ಕ್ರೀನ್ ಶೇರಿಂಗ್ ಯಾವುದೇ ಆಪ್ ಗಳನ್ನು ಡೌನಲೊಡ್ ಮಾಡಬೇಡಿ. ನಿಮ್ಮ ಸಮಸ್ಯೆಗಳಿದ್ದರೆ ನೇರವಾಗಿ ಸ್ಥಳೀಯ ಬ್ಯಾಂಕ್ ವ್ಯವಸ್ಥಾಪಕರನ್ನು ಸಂಪರ್ಕಿಸಬೇಕು ಎಂದು ಗ್ರಾಹಕರಿಗೆ ಸಲಹೆ ನೀಡಿದರು.

ರಾಮಕೃಷ್ಣ ,ಧರ್ಮೇಂದ್ರ, ಚಂದ್ರಶೇಖರ, ಶಾಖಾ ವ್ಯವಸ್ಥಾಪಕ ರಾಜಣ್ಣ, ಗ್ರಾಮದ ಮುಖಂಡರಾದ ಹೆಚ್ ಕೆ ಕಲ್ಲೇಶ್, ರಾಜೇಂದ್ರ, ರಾಜೇಂದ್ರ ಗೌಡ ,ರಮೇಶ, ಸಂದೀಪ್ ಗೌಡ, ಜೆ. ವಿಜಯಪ್ಪ, ಉಮೇಶ್. ಮಹಾಂತೇಶ್, ಶಿಲ್ಪಾಚಾರಿ, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಪ್ರಶಾಂತ ಸುತ್ತಮುತ್ತಲಿನ ಗ್ರಾಮದವರು ಹಾಜರಿದ್ದರು.

# ರಕ್ತ ಕೊಟ್ಟೇವು ಒಂದಿಂಚು ಭೂಮಿ ಬಿಡೆವು

## ವಕ್ಫ್ ಹೆಸರಿಗೆ ಪಡೆದ ರೈತರ, ಮಠಗಳ ಭೂಮಿ ಮರಳಿಸಿ | ಶೀಘ್ರ ಪಹಣಿಯಲ್ಲಿ ವಕ್ಫ್ ಹೆಸರು ತೆಗೆಯಬೇಕು

## ಮಾಜಿ ಸಚಿವ ಬಿ.ಶ್ರೀರಾಮುಲು ಸರ್ಕಾರದ ವಿರುದ್ಧ ಆಕ್ರೋಶ | ಮಂತ್ರಿಗಳು ಕ್ಷಮೆ ಕೇಳಲಿ | ಹೋರಾಟ ನಿಲ್ಲದು

**ಹಂಪಿ ಟೈಮ್ಸ್ ಹೊಸಪೇಟೆ**

ನಾಡಿನಲ್ಲಿ ತಾತ, ಮುತ್ತಾತನ ಕಾಲದಿಂದ ಕೃಷಿ ಮಾಡಿ ಕೊಂಡು ಬಂದಿರುವ ರೈತಕುಟುಂಬಗಳ ಪಹಣಿಯಲ್ಲಿ ದಿಢೀರನೆ ವಕ್ಫ್ ಹೆಸರು ಹೇಗೆ ಸೇರ್ಪಡೆಯಾಯಿತು. ಸಚಿವ ಸಂಪುಟದ ಅನುಮತಿ ಇಲ್ಲದೆಯೇ ಭೂಮಿ ವಶಪಡಿಸಿಕೊಳ್ಳಲು ಮಂತ್ರಿಗಳು ಮುಂದಾದರೇ?. ಸಿಎಂ ಸಿದ್ದರಾಮಯ್ಯನವರಿಗೆ ಇದು ತಪ್ಪು ಎಂದೆನಿಸ ಲಿಲ್ಲವೇ? ಮಂತ್ರಿಗಳ ನಡೆ ಖಂಡಿಸಿ ಜನರ ಬಳಿ ಕ್ಷಮೆ ಕೇಳಿ ಎಂದು ಮಂತ್ರಿಗಳಿಗೆ ಸಿಎಂ ಏಕೆ ಹೇಳ ಲಿಲ್ಲ.? ಮಂತ್ರಿಗಳಿಗೂ ಹೇಳುವಷ್ಟು ನೈತಿಕ ಹಕ್ಕು ಸಿಎಂ ಕಳೆದುಕೊಂಡಿದ್ದಾರೆಯೇ? ಅಕ್ರಮ ಆಸ್ತಿ ವಶಕ್ಕೆ ಮುಂದಾಗಿರುವ ವಕ್ಫ್ ವಿರುದ್ಧ ಸಿಎಂ ಕ್ರಮಕೈಗೊಳ್ಳದೇ ಪರೋಕ್ಷವಾಗಿ ಬೆಂಬಲಿಸುತ್ತಿದ್ದಾರೆಯೇ? ಸರ್ಕಾರದ ವಿರುದ್ಧ ಪ್ರಶ್ನೆಗಳ ಸುರಿಮಳೆಗೈದು, ರಾಜ್ಯ ಸರ್ಕಾರದ ವಕ್ಫ್ ಖಾತೆ ಮಂತ್ರಿಗಳು ನಮ್ಮನ್ನು ಸೈತಾನ್ ಎಂದು ಕರೆದರೂ ಸಂಸ್ಕಾರ ತಿಳಿದಂತ ಸಿಎಂ ಸುಮ್ಮನಿದ್ದಾರೆ. ನಿಮ್ಮಂತೆ ನಾವು ಹಗುರವಾಗಿ ಮಾತನಾಡಲಾರೆವು. ಆದರೆ ರಕ್ತ ಕೊಟ್ಟೇವು ರೈತರ ಒಂದಿಂಚು ಭೂಮಿ ಬಿಡೆವು ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



ನಗರದ ತಾಲೂಕು ಕಚೇರಿ ಮುಂಭಾಗದಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ನಮ್ಮ ಭೂಮಿ ನಮ್ಮಹಕ್ಕು ಬೃಹತ್ ಆಂದೋಲನದಲ್ಲಿ ಶುಕ್ರವಾರ ಮಾತನಾಡಿದರು. ರಾಜ್ಯ ಸರ್ಕಾರ ವಕ್ಫ್ ಹೆಸರಿನಲ್ಲಿ ರೈತರ, ಹಿಂದೂಗಳ, ಮಠ ಮಂದಿರಗಳ ಜಮೀನನ್ನು ವಶಕ್ಕೆ ಪಡೆದಿರುವುದು ಖಂಡನೀಯ. ರಾಜ್ಯದ ಬಡ ಜನರ ಬಿಪಿಎಲ್ ಕಾರ್ಡ್ ರದ್ದುಪಡಿಸುವ ಮೂಲಕ ಬಡವರ ಅನ್ನ ಕಸಿದಿದ್ದಾರೆ. ರೈತರು ನೆಮ್ಮದಿಯಿಂದ ಬದುಕು ನಡೆಸದಂತಾಗಿದೆ. ವಕ್ಫ್ ಆಸ್ತಿಗೆ ಸಂಬಂದಿಸಿದಂತೆ ನೋಟೀಸನ್ನು ಹಿಂಪಡೆದರೆ ಸಾಲು, 1947ರ ಗೆಜೆಟ್ ಅಧಿಸೂಚನೆಯನ್ನು ರದ್ದು ಮಾಡಬೇಕು. ಕೇಂದ್ರ ಸರ್ಕಾರ ಬಡವರಿಗಾಗಿಯೇ ಅಕ್ಕಿ ನೀಡುತ್ತಿದೆ. ಕಾರ್ಡ್ ರದ್ಧತಿಯಿಂದ ಸರ್ಕಾರದ ಆಯುಷ್ಮಾನ್ ಯೋಜನೆಯ ನೆರವೂ ಸಿಗದಿರುವ ಆತಂಕದಲ್ಲಿ ಜನರಿದ್ದಾರೆ. >>3

## ಸ್ಟುಡೆಂಟ್ ಕಾಲಂ

# ಪ್ರಯತ್ನಕ್ಕೆ ಎಂದಿಗೂ ಸೋಲಿಲ್ಲ



ಏಣಗಿ ಎಂಬ ಊರಿನಲ್ಲಿ ಒಂದು ದೊಡ್ಡ ಬೆಟ್ಟವಿತ್ತು. ಆ ಊರಿನಲ್ಲಿ ಮಾಬು ಎಂಬ ಹುಡುಗ ಇದ್ದನು. ಅವನಿಗೆ ಛಲದ ಮನೋಭಾವನೆ ಇತ್ತು. ಒಂದು ದಿನ ಅವನು ಆ ಬೆಟ್ಟವನ್ನು ಹತ್ತಬೇಕೆಂದು ತೀರ್ಮಾನ ಮಾಡಿದನು. ಮರುದಿನ ಅವನು ಆ ಬೆಟ್ಟದ ಹತ್ತಿರ ಹೋಗಿ ಬೆಟ್ಟವನ್ನು ಹತ್ತಲು ಪ್ರಯತ್ನಿಸಿದ. ಆದರೆ ಹತ್ತಲು ಆಗಲಿಲ್ಲ. ಕಾಲು ಜಾರಿ ಕೆಳಗೆ ಬಿದ್ದ. ಪುನಃ ಮರುದಿನ ಬೆಟ್ಟ ಹತ್ತಲು ಪ್ರಯತ್ನಿಸಿದ. ಅಂದೂ ಕೂಡಾ ಹತ್ತಲು ಆಗಲಿಲ್ಲ. ಹೀಗೆ ನಾಲ್ಕಾರು ದಿನಗಳು ಪ್ರಯತ್ನಿಸಿ ವಿಫಲನಾದ. ಆದರೂ ತನ್ನ ಪ್ರಯತ್ನವನ್ನು ಬಿಡಲಿಲ್ಲ.

ಆಗ ಅವನು ಅಲ್ಲಿಯೇ ಇದ್ದ ಒಂದು ಇರುವೆಯನ್ನು ನೋಡುತ್ತಾನೆ. ಆ ಇರುವೆಯು ಬೆಟ್ಟವನ್ನು ಹತ್ತಲು ಪ್ರಯತ್ನಿಸುತ್ತಿರುತ್ತದೆ. ಆದರೆ ಅದು ಪದೇ–ಪದೇ ಜಾರಿ ಬೀಳುತ್ತದೆ. ಆದರೂ ಇರುವೆಯು ಅದರ ಪ್ರಯತ್ನವನ್ನು ಬಿಡುವುದಿಲ್ಲ ಮತ್ತು ಕೊನೆಗೆ ಅದು ಬೆಟ್ಟ ಹತ್ತುವಲ್ಲಿ ಯಶಸ್ವಿ ಆಗುತ್ತದೆ. ಆಗ ಅವನು 'ಈ ಸಣ್ಣ ಇರುವೆಯೇ ಬೆಟ್ಟವನ್ನು ಹತ್ತುವುದಾದರೆ, ನಾನು ಈ ಬೆಟ್ಟವನ್ನು ಹತ್ತಬಹುದು' ಎಂದು ನಿರ್ಧಾರ ಮಾಡಿ ಪುನಃ ಬೆಟ್ಟವನ್ನು ಹತ್ತಲು ಪ್ರಯತ್ನಿಸಿದ. ಆದರೆ ಅಂದೂ ಹತ್ತಲಾಗಲಿಲ್ಲ.

ಸುಸ್ತಾಗಿ ಅಲ್ಲಿದ್ದ ಕೆರೆಯ ದಂಡೆಯ ಮೇಲಿದ್ದ ಮರದ ಕೆಳಗೆ ಕುಳಿತ. ಆ ಮರದ ರೆಂಬೆಯ ಮೇಲೆ ಗುಬ್ಬಚ್ಚಿಯು ತನ್ನ ಗೂಡನ್ನು ಕಟ್ಟುವುದನ್ನು ನೋಡಿದ. 'ಈ ಗುಬ್ಬಚ್ಚಿಯು ಹೇಗೆ ಸತತ ಪ್ರಯತ್ನದಿಂದ ಗೂಡನ್ನು ಕಟ್ಟುತ್ತದೆಯೋ, ಹಾಗೆಯೇ ನಾನು ನನ್ನ ಪ್ರಯತ್ನವನ್ನು ಬಿಡಬಾರದು' ಎಂದು ತನ್ನ ಮನದೊಳಗೆ ಅಂದುಕೊಳ್ಳುತ್ತಾ ಮನೆಕಡೆ ಹೆಜ್ಜೆ ಹಾಕಿದ. ಮರುದಿನ ಅವನು ಪುನಃ ಆ ಬೆಟ್ಟವನ್ನು ಹತ್ತಲು ಪ್ರಯತ್ನಿಸಿದ. ಅಂದು ಅವನು ಬೆಟ್ಟವನ್ನು ಹತ್ತುವಲ್ಲಿ ಯಶಸ್ವಿಯಾದ. ಸತತ ಪ್ರಯತ್ನದಿಂದ ಮಾಬು ತಾನು ಅಂದುಕೊಂಡಿದ್ದನ್ನು ಸಾಧಿಸಿದ್ದ. ಇದೇ ತರಹ ಯಾರೇ ಆದರೂ ಸತತ ಪ್ರಯತ್ನ ಮಾಡಿದರೆ ಅವರಿಗೆ ಎಂದಿಗೂ ಸೋಲಾಗುವುದಿಲ್ಲ ಎಂಬುದು ತಿಳಿಯುತ್ತದೆ. ನಾವು ಪ್ರಯತ್ನ ಮಾಡಿದರೆ ನಮಗೆ ಫಲ ಸಿಕ್ಕೇ ಸಿಗುತ್ತದೆ. ಅಲ್ಲವೇ?

**– ಆರ್. ಕೌಸರ್. 10ನೇ ತರಗತಿ.**
ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)

### ಪ್ರೀತಿಯ ವಿದ್ಯಾರ್ಥಿಗಳೇ ನಿವೂ ಬರೆಯಿರಿ

ಪ್ರೀತಿಯ ವಿದ್ಯಾರ್ಥಿಗಳೇ ನಿಮಗಾಗಿ ನಿಮ್ಮ ಬರವಣಿಗೆ ಕೌಶಲ ಹೆಚ್ಚಿಸಿಕೊಳ್ಳಲು **ಹಂಪಿ ಟೈಮ್ಸ್** **ಸ್ಟುಡೆಂಟ್ ಕಾಲಂ ವೇದಿಕೆ** ಕಲ್ಪಿಸಿದೆ. ನೀವು ಸಣ್ಣ ಸಣ್ಣ ಕಥೆ, ಕವನಗಳನ್ನು ಬರೆಯಬಹುದು. ಇಂದೇ ಆರಂಭಿಸಿ ನೀವು ಭವಿಷ್ಯದಲ್ಲಿ ಲೇಖಕರಾಗಿ ಬೆಳೆಯಿರಿ.
ಇ–ಮೇಲ್:hampitimes@gmail.com
M: 94486 33038

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ಭೂ ವಾತಾವರಣ ಮಾಯವಾದರೆ....

ಭೂಮಿ ಒಂದು ವಿಶಿಷ್ಠ ಗ್ರಹ, ಜೀವಿಗಳು ವಾಸಿಸಲು ಯೋಗ್ಯ ಗ್ರಹ. ಭೂ ಗ್ರಹ ವಾತಾವರಣ ಹೊಂದಿರುವುದರಿಂದ ಜೀವಿಗಳು ಜೀವ ತಳೆಯಲು ಮತ್ತು ವಿಕಾಸ ಹೊಂದಲು ಸಾಧ್ಯವಾಗಿದೆ. ಇಂತಹ ಗ್ರಹದ ವಾತಾವರಣ ಇದ್ದಕ್ಕಿಂದತೆ ಮಾಯವಾದರೆ ಏನಾಗ್ತಿತ್ತು! ಎಂಬ ಕಾಲ್ಪನಿಕತೆ ಮೂಡದಿರದು. ಏನಾಗ್ತಿತ್ತು ಅಂತ ತಿಳಿಯುವುದಕ್ಕಿಂತ ಮೊದಲು ವಾತಾವರಣ ಎಷ್ಟು ಮುಖ್ಯ ಎಂದು ತಿಳಿಯುವ. ಭೂಮಿಯ ವಾತಾವರಣಕ್ಕೆ ಕಾರಣವಾದ ಅನಿಲಗಳ ರಕ್ಷಣಾತ್ಮಕ ಪದರವಿಲ್ಲದೆ ಸೌರಮಂಡಲದ ಕಠಿಣ ಪರಿಸ್ಥಿತಿಗಳನ್ನು ಎದುರಿಸುವುದು ಕಷ್ಟ. ವಾತಾವರಣ ಇಲ್ಲದಿದ್ರೆ ಭೂಮಿಯು ಬಂಜರಾಗುತ್ತಿತ್ತು ಮತ್ತು ನಿರ್ಜೀವ ಗ್ರಹ ಎನಿಸಿಕೊಳ್ಳುತ್ತಿತ್ತು. ವಾತಾವರಣವು ಅಗತ್ಯ ಉಷ್ಣತೆಯನ್ನು ಒದಗಿಸುವ ಮೂಲಕ ಹಾನಿಕಾರಕ ಸೌರ ಕಿರಣಗಳನ್ನು ಹೀರಿಕೊಂಡು ಗ್ರಹದ ನಿವಾಸಿಗಳನ್ನು ರಕ್ಷಿಸುತ್ತದೆ. ವಾತಾವರಣವು ಜೀವಿಗಳಿಗೆ ಅಗತ್ಯವಾದ ಆಮ್ಲಜನಕ ಹಾಗೂ ಇಂಗಾಲದ ಡೈ ಆಕ್ಸೈಡನ್ನು ನೀಡುವುದರ ಜೊತೆಗೆ ಸೂರ್ಯನ ಶಕ್ತಿಗೆ ಓಜೋನ್ ಪದರವನ್ನು ರೂಪಿಸಿ ಬಾಹ್ಯಾಕಾಶದ ಅಪಾಯಗಳನ್ನು ನಿವಾರಿಸುತ್ತದೆ. ಇಂತಹ ಅಗಾಧ ಮಹತ್ವವುಳ್ಳ ವಾತಾವರಣ ಮಾಯವಾದರೆ ಏನಾಗ್ತಿತ್ತು ಎಂಬುದು ಇಂದಿನ ಚರ್ಚಾ ವಿಷಯ.

ಭೂ ವಾತಾವರಣ ಇಲ್ಲದಿದ್ರೆ ಏನಾಗಬಹುದು ಎಂಬ ನಿರೀಕ್ಷೆಯ ಮೊದಲ ಉತ್ತರ, ಇಡೀ ಭೂಗ್ರಹ ನಿಶ್ಯಬ್ದವಾಗುತ್ತಿತ್ತು. ಹೌದು ವಾತಾವರಣ ಇಲ್ಲದಿದ್ರೆ ಯಾವುದೇ ಶಬ್ದವೂ ಕೇಳಲಾರದು. ಶಬ್ದ ಪ್ರಸಾರಕ್ಕೆ ಮಾಧ್ಯಮ ಅಗತ್ಯ. ಬಹುತೇಕವಾಗಿ ನಾವೆಲ್ಲರೂ ವಾತಾವರಣದ ಗಾಳಿಯ ಮೂಲಕ ಶಬ್ದ ಗ್ರಹಿಸುತ್ತೇವೆಯೇ ಹೊರತು ನೆಲದ ಕಂಪನಗಳಿಂದ ಅಲ್ಲ. ವಾತಾವರಣ ಇಲ್ಲದಿದ್ರೆ ಯಾವುದೇ ಶಬ್ದವು ನಮ್ಮ ಕಿವಿಗೆ ಕೇಳುತ್ತಲೇ ಇರಲಿಲ್ಲ. ನಾವು ಮಾತನಾಡಿದ್ದು ಇನ್ನೊಬ್ಬರಿಗೆ ತಿಳಿಯುತ್ತಿರಲಿಲ್ಲ. ಭೂ ವಾತಾವರಣ ಇಲ್ಲದಿದ್ರೆ ಪಕ್ಷಿಗಳು ಮತ್ತು ವಿಮಾನಗಳು ಹಾರಾಟ ನಡೆಸಲಾರವು. ಇವುಗಳ ಹಾರಾಟಕ್ಕೆ ವಾತಾವರಣ ಸೂಕ್ತ ವೇದಿಕೆ ನಿರ್ಮಾಣ ಮಾಡಿದೆ. ವಾತಾವರಣ ಇರೋದ್ರಿಂದ ಭೂಮಿಯ ಆಕಾಶ ನೀಲಿಯಾಗಿ ಕಾಣುತ್ತದೆ. ವಾತಾವರಣ ಇಲ್ಲದಿದ್ರೆ ಆಕಾಶವು ಕಪ್ಪು ಬಣ್ಣಕ್ಕೆ ತಿರುಗುತ್ತಿತ್ತು. ಸೂರ್ಯೋದಯ ಹಾಗೂ ಸೂರ್ಯಾಸ್ತದ ಸುಂದರ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ಆಗುತ್ತಿರಲಿಲ್ಲ.

ವಾತಾವರಣ ಮಾಯವಾದರೆ ಭೂ ಮೇಲ್ಮೈ ಮೇಲಿನ ಎಲ್ಲಾ ಸಸ್ಯ ಹಾಗೂ ಜೀವಿಗಳು ಸಾಯುತ್ತವೆ. ವಾತಾವರಣ ಇಲ್ಲದಿದ್ದರೆ ನಿರ್ವಾತ ಏರ್ಪಡುತ್ತದೆ. ನಿರ್ವಾತದಲ್ಲಿ ನಾವು ಬಹುಕಾಲ ಬದುಕಲು ಸಾಧ್ಯವಿಲ್ಲ. ಮಾನವರನ್ನೂ ಸೇರಿದಂತೆ ಎಲ್ಲಾ ಜೀವಿಗಳ ದೇಹದ ಉಷ್ಣತೆ ಕ್ರಮೇಣವಾಗಿ ಏರತೊಡಗುತ್ತದೆ. ದೇಹದಲ್ಲಿ ನೀರಿನಂಶ ಕಡಿಮೆ ಯಾಗುತ್ತದೆ. ಬಾಯಲ್ಲಿನ ಲಾಲಾರಸ ದೇಹದ ಉಷ್ಣದಿಂದ ಕುದಿಯುತ್ತದೆ. ಶ್ವಾ ಸ ಕ ೋ ಶ ಗ ಳ ು ಒಡೆದುಹೋಗಬಹುದು.






ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ವಾತಾವರಣ ಇಲ್ಲದಿದ್ರೆ ಬಾಹ್ಯಾಕಾಶದಿಂದ ಬರುವ ಸೌರ ವಿಕಿರಣ ಹಾಗೂ ಕಾಸ್ಮಿಕ್ ಕಿರಣಗಳು ನಮ್ಮ ಚರ್ಮ ಮತ್ತು ಕಣ್ಣುಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಸೌರ ಫಿಲ್ಟರ್ ಎನಿಸಿದ ಓಝೋನ್ ಇಲ್ಲದೇ ಹೋದರೆ ಸೂರ್ಯನ ಸ್ನಾನ ಮಾರಕವಾಗುತ್ತದೆ. ನದಿಗಳು ಸರೋವರುಗಳು, ಸಾಗರಗಳ ನೀರು ಕುದಿಯುತ್ತದೆ. ಆಗ ಜೀವಿಗಳಿಗೆ ಅಗತ್ಯವಾದ ಜೀವಜಲ ಇಲ್ಲದಂತಾಗುತ್ತದೆ. ಸಾಗರಗಳಿಂದ ಬರುವ ನೀರಿನ ಆವಿ ಹಸಿರುಮನೆ ಅನಿಲವಾಗಿ ಪರಿವರ್ತನೆ ಹೊಂದುತ್ತದೆ. ಸೌರ ವಿಕಿರಣವು ವಾತಾವರಣದಲ್ಲಿನ ಆಮ್ಲಜನಕವನ್ನು ಶಕ್ತಿಗುಂದಿಸುತ್ತದೆ. ಉಸಿರಾಡಲು ತೆಳುವಾದ ಗಾಳಿಯೂ ಕೂಡಾ ಇಲ್ಲದಂತಾಗುತ್ತದೆ. ಉಸಿರಾಡಲು ಗಾಳಿ ಇಲ್ಲದೇ ಜೀವಿಗಳು ಸಾಯುತ್ತವೆ. ಸಸ್ಯಗಳು ನಶಿಸುತ್ತವೆ. ಮೀನು ಮತ್ತು ಇನ್ನಿತರೇ ಜಲಚರಗಳು ಅಳಿದುಹೋಗುತ್ತವೆ. ಆದಾಗ್ಯೂ ಕೆಲವು ಬ್ಯಾಕ್ಟೀರಿಯಾಗಳು ಬದುಕಬಲ್ಲವು. ಕೀಮೋಸೈಂಥೆಟಿಕ್ ಎಂಬ ಬ್ಯಾಕ್ಟೀರಿಯಾ ವಾತಾವರಣ ಇಲ್ಲದೆಯೂ ಬದುಕಬಲ್ಲದು ಎಂಬುದನ್ನು ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ.

ವಾತಾವರಣ ಇಲ್ಲದಿದ್ರೆ ಹಗಲು ಮತ್ತು ರಾತ್ರಿಗಳ ತಾಪಮಾನದಲ್ಲಿ ಏರುಪೇರುಗಳಾಗುತ್ತವೆ. ಹಗಲು ಹೆಚ್ಚು ಉಷ್ಣತೆ ಇದ್ದರೆ ರಾತ್ರಿ ಕಡಿಮೆ ಉಷ್ಣತೆ ದಾಖಲಾಗುತ್ತದೆ. ಅದು ಸರಾಸರಿ 180 ಸೆಲ್ಸಿಯಸ್‌ಗಿಂತ ಕೆಳಗಿಳಿಯುತ್ತದೆ. ವಾತಾವರಣ ಇಲ್ಲದಿದ್ದರೆ ಜ್ವಾಲಾಮುಖಿಗಳು ಸ್ಫೋಟಗೊಳ್ಳುತ್ತಲೇ ಇರುತ್ತವೆ. ಇದರಿಂದ ಭೂಮಿಗೆ ಮತ್ತಷ್ಟು ಇಂಗಾಲದ ಡೈ ಆಕ್ಸೈಡ್ ಸೇರ್ಪಡೆಯಾಗುತ್ತದೆ. ಬಾಹ್ಯಾಕಾಶದಿಂದ ಬರುವ ಕ್ಷುದ್ರಗ್ರಹಗಳು ಭೂಮಿಯ ಮೇಲೆ ಅಲ್ಲೋಲ ಕಲ್ಲೋಲ ಉಂಟು ಮಾಡುತ್ತವೆ. ನಾಸಾದ ಅಧ್ಯಯನದ ಪ್ರಕಾರ ಪ್ರತಿದಿನ 100 ಟನ್‌ಗಿಂತಲೂ ಅಧಿಕ ತೂಕದ ಶಿಲಾತುಣುಕುಗಳು ಭೂಮಿಗೆ ಬಡಿಯುತ್ತವೆ. ವಾತಾವರಣ ಇರುವುದರಿಂದ ಬಹುತೇಕ ಕ್ಷುದ್ರಗ್ರಹಗಳು, ಉಲ್ಕೆಗಳು ಭೂ ವಾತಾವರಣ ತಲುಪುತ್ತಿದ್ದಂತೆ ಉರಿದು ಬೂದಿಯಾಗುತ್ತವೆ. ವಾತಾವರಣ ಇಲ್ಲದಿದ್ರೆ ಇವು ನೇರವಾಗಿ ಭೂಮಿಯ ಮೇಲೆ ಅಪ್ಪಳಿಸಿ ದೊಡ್ಡ ದೊಡ್ಡ ಕುಳಿಗಳನ್ನು ಉಂಟು ಮಾಡಬಹುದು.

ಸಮಾಧಾನಕರ ಸಂಗತಿ ಎಂದರೆ ಇನ್ನೂ ಭೂಮಿಯ ಮೇಲೆ ವಾತಾವರಣ ಇದೆ. ಹಾಗಾಗಿ ಭೂಮಿಗೆ ಹಾಗೂ ಅದರಲ್ಲಿನ ಜೀವಿಗಳಿಗೆ ಸದ್ಯ ಯಾವುದೇ ರೀತಿಯ ತೊಂದರೆ ಇಲ್ಲ. ಆದರೆ ಮಾನವನ ದುರಾಸೆಗೆ ಮಿತಿ ಇಲ್ಲ. ಈಗಾಗಲೇ ಬಹುತೇಕ ವಾತಾವರಣವನ್ನು ಹಾಳು ಮಾಡಿದ್ದೇವೆ ಮತ್ತು ಮಾಡುತ್ತಲೇ ಇದ್ದೇವೆ. ಇದರಿಂದ ಹವಾಮಾನದಲ್ಲಿ ವೈಪರೀತ್ಯಗಳಾಗುತ್ತಿರುವುದು ನಮ್ಮೆಲ್ಲರ ಅನುಭವಕ್ಕೆ ಬಂದಿದೆ. ಜಾಗತಿಕ ತಾಪಮಾನ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ವಾತಾವರಣ ತನ್ನ ಶಕ್ತಿಯನ್ನು ಕ್ಷೀಣಿಸಿಕೊಳ್ಳುತ್ತಿದೆ. ಈಗಲಾದರೂ ನಾವು ಎಚ್ಚೆತ್ತುಕೊಂಡು ಭೂ ವಾತಾವರಣ ಕಾಪಾಡಲು ಪ್ರಯತ್ನಿಸಿದರೆ ಮುಂದಿನ ನಮ್ಮ ಪೀಳಿಗೆಗೆ ಒಂಚೂರು ಉಸಿರಾಡಲು ಗಾಳಿ, ಕುಡಿಯಲು ನೀರು ಸಸ್ಯಗಳು ಬೆಳೆಯಲು ಸೂಕ್ತ ಹವಾಮಾನ ಮತ್ತು ವಾಯುಗುಣ ಉಳಿಸಬಹುದಲ್ಲವೇ?

# ವ್ಯಾಪಾರೀಕರಣ ಶಿಕ್ಷಣ ತಡೆಯಲು ಪಾಲಕರಲ್ಲಿ ಬೇಕಿದೆ ಬದಲಾವಣೆ

ಶಿಕ್ಷಣ ಮಾನವನ ಮೂಲಭೂತ ಅಗತ್ಯತೆಯಲ್ಲಿ ಒಂದಾಗಿದೆ . ದೇಹಕ್ಕೆ ಆಹಾರ ನೀರು ಹೇಗೆ ಅವಶ್ಯವೋ ಹಾಗೆಯೆ ವ್ಯಕ್ತಿಯೋರ್ವನ ಸರ್ವತೋಮುಖ ಬೆಳೆವಣಿಗೆಗೆ ಶಿಕ್ಷಣ ಅವಶ್ಯವಾಗಿದೆ

ತಲತಲಾಂತರದಿಂದ ಅದರಲ್ಲೂ ಭಾರತದಲ್ಲಿ ಶಿಕ್ಷಣದ ಪ್ರಾಮುಖ್ಯ ಅರಿತೇ ಗುರುಕುಲ ಪದ್ಧತಿ ಜಾರಿಯಲ್ಲಿತ್ತು. ಋಷಿ ಮುನಿಗಳು ಗುರುಕುಲ ನಡೆಸಿ ಜಾತಿ ಭೇದವಿಲ್ಲದೆ ಎಲ್ಲರಿಗೂ ವಿದ್ಯಾದಾನ ಮಾಡುತ್ತಿದ್ದರು. ಸುಮಾರು ಎಂಟನೆಯ ವಯಸ್ಸಿಗೆ ಗುರುಕುಲ ಸೇರಿದ ಮಕ್ಕಳು ಪ್ರಾಯಕ್ಕೆ ಬರುವರೆಗೂ ಗುರುಕುಲದಲ್ಲಿ ಅಭ್ಯಸಿಸಿ, ಮನೆಕೆಲಸ ಪಶುಸಂಗೋಪನೆ ಹಾಗೂ ಅರಣ್ಯದಿಂದ ಕಟ್ಟಿಗೆ ತರುವ ಕೆಲಸಗಳನ್ನೂ ಮಾಡುತ್ತಿದ್ದರು. ಹೀಗೆ ಅವರಿಗೆ ದೈಹಿಕ ಕ್ಷಮತೆಯೂ ಸೇರಿದಂತೆ ಹಲವು ಕುಶಲ ಕಲೆಗಳಲ್ಲಿ ಪ್ರಾವೀಣ್ಯತೆ ಸಾಧಿಸಿ ಮುಂದಿನ ಜೀವನಕ್ಕೆ ಅನುಕೂಲವಾಗುವಂತೆ ಬದುಕಿನ ವೈರುಧ್ಯವನ್ನು ಎದುರಿಸುವಂತೆ ತಯಾರಾಗುತ್ತಿದ್ದರು .




ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ

Scan For Digital Colourful
HAMPI TIMES E-paper

ಆದರೆ ಕಾಲ ಕ್ರಮೇಣ ಪರಕೀಯರ ದಾಳಿ ಬ್ರಿಟಿಷ್ ಗುಲಾಮಿತನ ಶಿಕ್ಷಣ ಪದ್ಧತಿ ಯನ್ನೇ ಹಾಳುಗೆಡವಿತು. ಮೆಕಾಲೆಯ ಮೂಲಕ ಭಾರತದ ಪರಂಪರೆಯ ಬೇರುಗಳನ್ನೇ ಕೆಡವಿದ ಬ್ರಿಟಿಷರು ಪಾಶ್ಚಾತ್ಯ ಶಿಕ್ಷಣಕ್ರಮ ವನ್ನು ಹೇರಿದರು .

ಸ್ವತಂತ್ರ ಭಾರತದಲ್ಲಿ ಜಾಗತೀಕರಣ ಬರುವರೆಗೂ ಶಿಕ್ಷಣ ಸರಕಾರದ ಉಸ್ತುವಾರಿ ಯಲ್ಲೇ ಇತ್ತು. ಖಾಸಗಿ ಶಾಲೆಗಳು ಕಾನ್ವೆಂಟ್ ಗಳ ಹಾವಳಿ ಅಷ್ಟಿರಲಿಲ್ಲ. ಮೂಲತಃ ಹತ್ತನೆಯ ತರಗತಿಯ ತನಕದ ಶಿಕ್ಷಣ ಹೆಚ್ಚಾಗಿ ಮಾತೃಭಾಷೆಯ ಮಾಧ್ಯಮದಲ್ಲೇ ನಡೆಯುತಿತ್ತು . ಆದರೂ ಬಹುತೇಕ ಒಂದು ವರ್ಗ ಇಂಗ್ಲಿಷ್ ವ್ಯಾಮೋಹ ಹಾಗೂ ಅದರಿಂದ ದೊರಕುವ ಅವಕಾಶಗಳ ಹಿಂದೆಯೇ ಇತ್ತು.



ಭಾರತ ಜಾಗತೀಕರಣಕ್ಕೆ ಒಳಗಾಗಿ ಮುಕ್ತ ಮಾರುಕಟ್ಟೆಗೆ ತೆರೆದುಕೊಂಡಾಗ ಶಿಕ್ಷಣ ಕ್ಷೇತ್ರವೂ ಖಾಸಗೀಕರಣ ಧಾಳಿಯಿಟ್ಟಿತು. ನೋಡ ನೋಡುತ್ತಿದ್ದಂತೆ ಕಾನ್ವೆಂಟು ಇಂಟರ್ನ್ಯಾಷನಲ್ ಶಾಲೆಗಳು ಆರಂಭವಾದವು.

ಜಾಗತೀಕರಣದಿಂದ ಜನರ ಆರ್ಥಿಕ ಜೀವನ ಮಟ್ಟ ಹೆಚ್ಚಾದಂತೆ ಮಕ್ಕಳನ್ನು ಖಾಸಗೀ ಶಾಲೆಗಳಲ್ಲಿ ಓದಿಸುವ ಗೀಳು ಹೆಚ್ಚಾಯಿತು. ಹೆಚ್ಚು ದುಡ್ಡು ತೆತ್ತಾದರೂ ತಮ್ಮ ಮಕ್ಕಳು ಖಾಸಗಿ ಶಾಲೆಗಳಲ್ಲೇ ಓದಬೇಕೆಂಬ ಪೋಷಕರ ಬಯಕೆ ಅಂತಸ್ತು ಪ್ರತಿಷ್ಠೆ ವಿಷಯವಾಯಿತು . ಸರಕಾರೀ ಶಿಕ್ಷಣ ವ್ಯವಸ್ಥೆ ಕುಸಿಯಲಾರಂಭಿಸಿತು. ಜನರ ಸರಕಾರದ ಅವಗಣನೆಗೆ ಒಳಗಾಯಿತು. ಕಾಯಕಲ್ಪವಿಲ್ಲದಿದ್ದರೆ ಮುಚ್ಚುವ ಸ್ಥಿತಿ ಬಂತು.

ಈ ಪರಿಸ್ಥಿತಿಯನ್ನೇ ಬಂಡವಾಳ ಮಾಡಿಕೊಂಡು ಖಾಸಗಿ ಶಾಲೆಗಳು ಅಣಬೆಗಳಂತೆ ಬೆಳೆದವು. ತೀರಾ ಎಲ್‌ಕೆಜಿ ಗೆ ಲಕ್ಷಗಟ್ಟಲೇ ತೆತ್ತು ಶಾಲೆಗೆ ಸೇರಿಸ ಬೇಕಾದ ಪರಿಸ್ಥಿತಿ ಇಂದು ಇದೆ. ಬಡ ಹಾಗೂ ಮಾಧ್ಯಮ ವರ್ಗದವರ ಪರಿಸ್ಥಿತಿ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಯಾತಕ್ಕೂ ಬೇಡವಾಗಿದೆ. ಸರಕಾರೀ ಶಾಲೆಗಳಲ್ಲಿ ಓದಿಸುವುದಕ್ಕೆ ಆಗದ ಪರಿಸ್ಥಿತಿ ಹಾಗೆಯೇ ಖಾಸಗಿ ಶಾಲೆಗಳಲ್ಲಿ ಆರ್ಥಿಕ ಹೊರೆಹೊತ್ತು ಸಾಲ ಮಾಡಿ ಓದಿಸುವ ಪರಿಸ್ಥಿತಿ ಎದುರಾಗಿದೆ.

ಶಿಕ್ಷಣ ಹೀಗೆ ವ್ಯಾಪಾರೀಕರಣವಾಗಿದ್ದಕ್ಕೆ ಖಾಸಗಿ ಹಿತಾಸಕ್ತಿಗಳು ಎಷ್ಟು ಕಾರಣವೋ ಹಾಗೆಯೇ ಪೋಷಕರ ಮನಸ್ಥಿತಿಯೂ ಅಷ್ಟೇ ಕಾರಣವಾಗಿದೆ. ಶಿಕ್ಷಣ ಪ್ರತಿಷ್ಠೆಯ ವಿಷಯವಾಗಿರುವುದಕ್ಕೆ ಖಾಸಗಿ ಶಾಲೆಗಳು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿವೆ. ವಿವಿಧ ಸೌಲಭ್ಯ ಆಮಿಷಗಳನ್ನು ತೋರಿಸಿ ದಾಖಲಾತಿ ಹೆಚ್ಚಿಸಲು ಕಸರತ್ತು ಮಾಡುತ್ತಿವೆ. ಪಠ್ಯ ಕ್ರಮದಲ್ಲೂ ಹೆಚ್ಚಿನ ವಿಷಯಗಳನ್ನು ತುರುಕಿ ಜ್ಞಾನಾರ್ಜನೆ ಕೌಶಲ ವೃದ್ಧಿಗೆ ಒತ್ತು ಕೊಡದೆ ಬರಿಯ ವಿಷಯ ಸಂಗ್ರಹಣೆ ಮಾಡುವತ್ತ ಗಮನ ಹರಿಸಿವೆ. ಇದರಲ್ಲಿ ರಾಜಕೀಯದ ಹಿತಾಸಕ್ತಿಯೂ ಮಿಳಿತವಾಗಿದೆ. ಒಟ್ಟಿನಲ್ಲಿ ವಿದ್ಯೆಯಲ್ಲಿ ಅರಳಿ ಹೂವಾಗಬೇಕಾಗಿದ್ದ ಮಕ್ಕಳು ಶಾಲೆಗಳ ಪಠ್ಯ ಪುಸ್ತಕಗಳ ಸ್ಕೂಲ್ ಬ್ಯಾಗ್‌ನ ಭಾರದ ಜೊತೆ ಮಾನಸಿಕವಾಗಿಯೂ ದಣಿದು ಹೈರಾಣಾಗುತ್ತಿವೆ. ಇದನ್ನೆಲ್ಲಾ ಸಹಿಸಿ ಮುಂದೆ ಬರುವ ಮಕ್ಕಳು ಮುಂದೆ ಕಾಲೇಜಿನಲ್ಲೂ ದುಡ್ಡು ಸುರಿದೆ ಇಂಜಿನಿಯರಿಂಗ್ ಡಾಕ್ಟರ್ ಓದಿ ತಮ್ಮ ಜೀವನೋಪಾಯಕ್ಕೆ ಬುನಾದಿ ಹಾಕಿಕೊಳ್ಳುವ ಧಾವಂತಕ್ಕೆ ಬಿದ್ದಿವೆ. ಲಕ್ಷಗಟ್ಟಲೆ ಶುಲ್ಕವೆಂದು ತೆತ್ತಮೇಲೆ ಅದನ್ನು ವಾಪಸು ಗಳಿಸಲು ಹಣದ ಹಿಂದೆ ಬೀಳಲೇ ಬೇಕಾದಂತಹ ಪರಿಸ್ಥಿತಿ ಇದೆ. ನಮ್ಮ ಪೊಳ್ಳು ಅರ್ಥವ್ಯವಸ್ಥೆಯ ಯಂತ್ರಕ್ಕೆ ತೈಲವಾಗಿ ಕಾರ್ಮಿಕರಾಗಿ ಮಕ್ಕಳ ಸಂತತಿಯನ್ನೇ ಬಳಸಲಾಗುತ್ತಿದೆ. ಇದು ವ್ಯಾಪಾರೀಕರಣವಾದ ಶಿಕ್ಷಣದ ಇನ್ನೊಂದು ಮಜಲು ಹಾಗೂ ಕರಾಳ ಮುಖ .

ಶಿಕ್ಷಣ ಹಾಗೂ ಆರೋಗ್ಯ ಪ್ರತಿಯೊಬ್ಬರ ಹಕ್ಕು. ಅದು ವ್ಯಾಪಾರೀಕರಣವಾಗದೆ ಕೈಗೆಟುಕುವ ದರದಲ್ಲಿ ಪ್ರತಿಯೊಬ್ಬರಿಗೂ ಸಿಗುವಂತಾಗಬೇಕು. ಸರಕಾರ ಶಿಕ್ಷಣ ಸಂಸ್ಥೆಗಳು ತಮ್ಮ ಯೋಚನಾ ರೀತಿಯನ್ನು ಇಲ್ಲಿ ಬದಲಾಯಿಸಿಕೊಂಡು ಬರಿಯ ಲಾಭ ಹಣದ ಆಸೆಗೆ ಶಿಕ್ಷಣದ ವ್ಯಾಪಾರೀಕರಣವನ್ನು ನಿಲ್ಲಿಸಬೇಕು. ಆಗ ನಮ್ಮ ಮುಂದಿನ ಪೀಳಿಗೆ ಸಮಗ್ರ ಶಿಕ್ಷಣದಿಂದ ಅರಳಿದಾಗ ಸಮಾಜ ಸ್ವಸ್ಥವಾಗಿ ದೇಶ ದೃಢವಾಗುತ್ತದೆ. ಪೋಷಕರ ಜನರ ಮನೋಧರ್ಮದಲ್ಲೂ ಬದಲಾವಣೆ ಅಗತ್ಯ.

ಪ್ರತಿಯೊಬ್ಬ ಮಗುವನ್ನೂ ಇಂಜಿನಿಯರಿಂಗ್ ಡಾಕ್ಟರ್ ಮಾಡುವ ಹುಚ್ಚು ಆಸೆ ಬಿಟ್ಟು ಅವರ ಅಭಿರುಚಿಗೆ ತಕ್ಕಂತೆ ಅವರ ಇಷ್ಟದ ಕ್ಷೇತ್ರದಲ್ಲಿ ಬೆಳೆಯಲು ಬಿಟ್ಟರೆ ಶಿಕ್ಷಣದ ವ್ಯಾಪಾರೀಕರಣವೂ ನಿಲ್ಲುತ್ತದೆ. ಮೂಲಭೂತ ಶಿಕ್ಷಣವನ್ನು ಕೈಗೆಟುಕುವ ದರದಲ್ಲಿ ಕೊಡಮಾಡುವಂತಹ ಪ್ರೋತ್ಸಾಹದಾಯಕ ವಾತಾವರಣವನ್ನು ಸೃಷ್ಟಿಸುವಲ್ಲಿ ಪೋಷಕರ ಪಾತ್ರವೂ ಹೆಚ್ಚಾಗಿದೆ.

ಒಟ್ಟಿನಲ್ಲಿ ವ್ಯಾಪಾರೀಕರಣವಾಗಿರುವ ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ಅಗತ್ಯವಿದೆ. ಇಲ್ಲದಿದ್ದರೆ ಮುಂದೆ ಸ್ವಸ್ಥ ಸಮಾಜ ಹಾಗೂ ದೃಢ ದೇಶದ ಕನಸು ಕನಸಾಗಿಯೇ ಉಳಿಯುವುದು. ಈ ನಿಟ್ಟಿನಲ್ಲಿ ನಮ್ಮೆಲ್ಲರ ಪ್ರಾಮಾಣಿಕ ಪ್ರಯತ್ನವು ಅಗತ್ಯವಾಗಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ತಕ್ಕಡಿ

ಬದುಕ್ಕೊಂದು ಕನ್ನಡಿ
ಯೋಚಿಸಿ ನೀ ನಡಿ
ಹೊಂದಾಣಿಕೆಯ ಸೂತ್ರದಡಿ
ಬರೆಯೋಣ ಬಾಳಿನ ಮುನ್ನುಡಿ

ಬದುಕಲ್ಲಿರುವುದು ಹಲವಾರು ಪರಿವಿಡಿ
ಅನುಭವವೇ ಜೀವನದ ಕೈಪಿಡಿ
ಎದುರಾಗುವುದು ಕಷ್ಟಸುಖ ಅಡಿಗಡಿ
ಸೋಲೇ ಗೆಲುವಿನ ಸೋಪಾನ ನಾಣ್ಣುಡಿ

ನೋವು ನಲಿವಿನ ತಕ್ಕಡಿ
ಸರಿಯಾಗಿ ಅಳೆದು ಬಿಡಿ
ಸಂತಸವಾಗಲಿ ಬಾಳಲಿ ನೂರ್ಮಡಿ
ದುರಾಸೆಯ ಬಿಟ್ಟು ಬಿಡಿ

ಹಚ್ಚೋಣ ಜ್ಞಾನದ ಕಿಡಿ
ಪ್ರೀತಿ ಸ್ನೇಹ ಹಂಚಿ ನೋಡಿ
ಒಳ್ಳೆತನಕೆ ತೂಗುವುದು ತಕ್ಕಡಿ
ನಡೆದ ದಾರಿಯ ನೆನಪಿಡಿ

**–ಚೇತನ ಭಾರ್ಗವ, ಬೆಂಗಳೂರು**

### ಅತಿಥಿ ದೇವೋಭವ

ಅತಿಥಿಯ ಜೊತೆಯಲಿ ಮಿತಿಯನು
ಇರಿಸದೆ
ಹಿತವಿಹ ಭಾವ ಬಹುಮುಖ್ಯ
ಗತಿಯನು ಗಣಿಸದೆ ಚ್ಯುತಿಯನು ತಾರದೆ
ಜೊತೆಯದು ಬೆಳೆಸೆ ಇದುಮುಖ್ಯ

ಮನೆಯೆಡೆ ಬಂದರೆ ಮುನಿಯದೆ ರೇಗದೆ
ಮನದಲಿ ಪ್ರೀತಿ ತುಂಬಿರಲಿ
ಅನುದಿನ ಬಾರರು ಕನಲುವುದೇತಕೆ
ಗುಣದಲಿ ಬಂಧ ಬೆಸೆದಿರಲಿ

ಇಳೆಯಲಿ ಬದುಕಲು ಕಳುಹಿದ ದೇವನು
ತಳೆಯಲು ಪ್ರೀತಿ ಅನುಬಂಧ
ಬಳಗವ ಹೊಂದುತ ಕಳೆಯಲು ಸುಖದಲಿ
ಬೆಳೆಸುವ ಸ್ನೇಹ ಸಂಬಂಧ॥

**– ಪೆರ್ಮುಖ ಸುಬ್ರಹ್ಮಣ್ಯ ಭಟ್**

# ಆರೋಗ್ಯ ನಿರ್ಲಕ್ಷ್ಯ ಮಾಡಬೇಡಿ

## ಸಾರಿಗೆ ಸಿಬ್ಬಂದಿಗಳಿಗೆ ಸಲಹೆ : ಆರ್.ವಿ.ಪುರಾಣಿಕ್ । ಉಚಿತ ಆರೋಗ್ಯ ತಪಾಸಣಾ ಮತ್ತು ರಕ್ತದಾನ ಶಿಬಿರ

**■ ಹಂಪಿ ಟೈಮ್ಸ್ ಹೊಸಪೇಟೆ**

ನಿತ್ಯ ಸಾರ್ವಜನಿಕ ಸೇವೆಯಲ್ಲಿ ಕಾರ್ಯನಿರತರಾಗಿರುವ ಸಾರಿಗೆ ಸಿಬ್ಬಂದಿಗಳು ತಮ್ಮ ಆರೋಗ್ಯದ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ವಿಭಾಗೀಯ ನಿಯಂತ್ರಣಾಧಿಕಾರಿ ಆರ್.ವಿ. ಪುರಾಣಿಕ್ ಹೇಳಿದರು.

ನಗರದ ಕೆಕೆಎಸ್‌ಆರ್‌ಟಿಸಿ ಬಸ್ ಡಿಪೋದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಹಯೋಗದಲ್ಲಿ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ರಕ್ತದಾನ ಶಿಬಿರ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದರು. ಪ್ರತಿ ವರ್ಷದಂತೆ ಈ ಬಾರಿಯೂ



ಸಾರಿಗೆ ಸಿಬ್ಬಂದಿಗಳಿಗೆ ಆರೋಗ್ಯ ತಪಾಸಣೆ ಹಾಗೂ ಸಿಬ್ಬಂದಿಗಳಿಂದ ರಕ್ತದಾನ ನಡೆಸುತ್ತಿರುವುದು ಶ್ಲಾಘನೀಯ. ಸಾರಿಗೆ ಇಲಾಖೆ ಸಿಬ್ಬಂದಿಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ತಮ್ಮ ಆರೋಗ್ಯದ ಬಗ್ಗೆ ಗಮನ ಹರಿಸದೇ ನಿರ್ಲಕ್ಷಿಸುವುದು ಸಾಮಾನ್ಯವಾಗಿರುವುದರಿಂದ ಸಾರಿಗೆ ಸಿಬ್ಬಂದಿಗಳ ಆರೋಗ್ಯದ ಕಡೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.



ಇದೇ ವೇಳೆ ಸಾರಿಗೆ ಸಿಬ್ಬಂದಿಗಳಿಗೆ ರಕ್ತದೊತ್ತಡ, ಮಧುಮೇಹ, ಕಣ್ಣು ಪರೀಕ್ಷೆ, ಹಲ್ಲಿನ ಪರೀಕ್ಷೆ ತಪಾಸಣೆ ಕ್ಷಯರೋಗ ಸೇರಿದಂತೆ ಸಾಮಾನ್ಯ ರೋಗಗಳ ಬಗ್ಗೆ ತಪಾಸಣೆ ನಡೆಸಿದರು. ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಕ್ಷಯರೋಗ ನಿರ್ಮೂಲನ ಕಾರ್ಯಕ್ರಮದಡಿಯಲ್ಲಿ ಸಾರ್ವಜನಿಕರಿಗೆ ಕ್ಷಯರೋಗದ ಬಗ್ಗೆ ಜಾಗೃತಿ ಮೂಡಿಸುವ ಪ್ರಯುಕ್ತ ವಿಭಾಗೀಯ ನಿಯಂತ್ರಣಾಧಿಕಾರಿ ಆರ್.ವಿ.ಪುರಾಣಿಕ್ ಪೋಸ್ಟರ್ ಬಿಡುಗಡೆಗೊಳಿಸಿದರು. ಈ ವೇಳೆ ವೈದ್ಯರಾದ ಡಾ.ಸಹನಾ, ಡಾ.ಲಕ್ಷ್ಮೀ, ಹೆಚ್‌ಡಿಎಫ್‌ಸಿ ಬ್ಯಾಂಕ್‌ನ ವ್ಯವಸ್ಥಾಪಕರ ಆನಂದ್, ಕ್ಷಯರೋಗ ಮೇಲ್ವಿಚಾರಕ ಕಾಸಿಮ್ ಸಾಬ್, ಐಸಿಟಿಸಿ ಸಮಾಲೋಚಕ ಸಿದ್ದೇಶ್ವರ, ವಿಭಾಗಿಯ ಘಟಕ ಅಧ್ಯಕ್ಷ ಪರಮೇಶ್ವರಪ್ಪ ಸೇರಿದಂತೆ ಆರೋಗ್ಯ ಸಿಬ್ಬಂದಿಗಳು, ವಿಭಾಗೀಯ ಸಿಬ್ಬಂದಿ ಮತ್ತು ಕಾರ್ಮಿಕರು ಭಾಗವಹಿಸಿದ್ದರು.

# ರಕ್ತ ಕೊಟ್ಟೇವು, ಒಂದಿಂಚು ಭೂಮಿ ಬಿಡೆವು

ಮೊದಲ ಪುಟದಿಂದ

ಸರ್ಕಾರದ ಬಳಿಯಿರುವ ಹಣಬಲ, ತೋಳ್ಬಲವು ರಾಜ್ಯ ಮಕ್ಕಳಿಗೆ ಉಚಿತ ಶಿಕ್ಷಣ, ಉದ್ಯೋಗ ನೀಡುವಲ್ಲಿ ಬಳಕೆಯಾಗಲಿ. ಸರ್ಕಾರದಲ್ಲ ನಿತ್ಯ ಒಂದಲ್ಲ ಒಂದು ಹಗರಣ ಹೊರಬರುತ್ತಿವೆ. ಖಜಾನೆ ಖಾಲಿಯಾಗಿದೆ ಅಂತ್ಹೇಳಿ ಬಡವರ ಅನ್ನ ಕಸಿಯುವುದರಲ್ಲಿ ತೋರಿಸಬೇಡಿ. ವಕ್ಫ್ ಹೆಸರು ಸೇರಿಸಿದ ಎಲ್ಲಾ ಪಹಣಿಗಳು ಮೊದಲಿನಂತೆ ರೈತರ, ಮಠಗಳ ಹೆಸರಿಗೆ ಇಂತಿಷ್ಟು ದಿನದೊಳಗೆ ಬದಲಾಯಿಸುತ್ತೇವೆಂದು ಸಿಎಂ ದಿನ ನಿಗದಿಗೊಳಿಸಿ ಭರವಸೆ ನೀಡಬೇಕು. ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಮಾತನಾಡಿ, ಬಡತನ ರೇಖೆಗಿಂತ ಮೇಲ್ಪಟ್ಟವರು ಬಳಸುತ್ತಿದ್ದರೆ ಅಂತವರಿಗೆ ನೊಟೀಸು ನೀಡಿ, ಎಪಿಎಲ್‌ಗೆ ಬದಲಿಸಬಹುದಿತ್ತು. ಏಕಾಏಕಿ ಪಡಿತರ ಕಾರ್ಡ್ ರದ್ದು ಮಾಡಿರುವುದು ಖಂಡನೀಯ. ರೈತರ ಆಸ್ತಿ ಕಬಳಿಕೆ ವಕ್ಫ್ ಪ್ರೋತ್ಸಾಹ ನೀಡಿರುವುದು, ಮುಡಾ ಹಗರಣ, ವಾಲ್ಮೀಕಿ ನಿಗಮದ ಹಗರಣ ಹೊಣೆ ಹೊತ್ತು ಸಿಎಂ ರಾಜೀನಾಮೇ ನೀಡಬೇಕು. ಇನ್ಮುಂದೆ ಯಾವುದೇ ವಕ್ಫ್ ಅದಾಲತ್ ನಡೆಸದಂತೆ ಸರ್ಕಾರಿ ಆದೇಶವನ್ನು ಹೊರಡಿಸಬೇಕು. ಸಂಬಂಧಿಸಿದ ಗೆಜೇಟ್ ನೋಟಿಫಿಕೇಶನ್ ಹಿಂಪಡೆಯಬೇಕು. ಕೇಂದ್ರದ ವಕ್ಫ್ ತಿದ್ದುಪಡಿ ಕಾಯ್ದೆಗೆ ರಾಜ್ಯ ಸರ್ಕಾರವು ಮುಂದಿನ ಅಧಿವೇಶನದಲ್ಲಿ ಒಮ್ಮದಿಂದ ನಿರ್ಣಯ ಅಂಗೀಕರಿಸಿ ಕೇಂದ್ರಕ್ಕೆ ಕಳಿಸಿಕೊಡಬೇಕು. ಈಗ ರದ್ದು ಪಡಿಸಿರುವ ಪಡಿತರ ಕಾರ್ಡ್‌ಗಳನ್ನು ಮೊದಲಿನಂತೆ ಯಥಾಸ್ಥಿತಿ ಮುಂದುವರೆಸಬೇಕು ಎಂದು ಒತ್ತಾಯಿಸಿದರು.

ಹಿರಿಯ ಮುಖಂಡ ಸಾಲಿಸಿದ್ದಯ್ಯಸ್ವಾಮಿ, ಅಶೋಕ ಜೀರೆ, ಅಯ್ಯಾಳಿ ತಿಮ್ಮಪ್ಪ, ಸಂಡೂರು ಕ್ಷೇತ್ರದ ಅಭ್ಯರ್ಥಿ ಬಂಗಾರು ಹನುಮಂತ, ಯುವ ಮುಖಂಡ ಕೊಟ್ರೇಶ್ ಕಿಚಿಡಿ, ಸೇರಿದಂತೆ ಅನೇಕರು ಮಾತನಾಡಿದರು. ಪಕ್ಷದ ಕಾರ್ಯಕರ್ತರು, ಪದಾಧಿಕಾರಿಗಳು ಇದ್ದರು.

# ಕೆರೆ ನೀರಿನಿಂದ ಹಾನಿಯಾದ ಮನೆಗಳಿಗೆ ಅಗತ್ಯ ಪರಿಹಾರಕ್ಕೆ ಕ್ರಮ

## ಹುಲಿಕೆರೆ ಗ್ರಾಮಕ್ಕೆ ಶಾಸಕ ಡಾ.ಶ್ರೀನಿವಾಸ ಎನ್. ಟಿ ರವರು ಭೇಟಿ, ಪರಿಶೀಲನೆ । ದಿನಸಿಗೆ ವೈಯಕ್ತಿಕ ಆರ್ಥಿಕ ಸಹಾಯ

**■ ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಹಿರೇಕುಂಬಳಗುಂಟೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಹುಲಿಕೆರೆ ಗ್ರಾಮಕ್ಕೆ ಶಾಸಕ ಡಾ.ಶ್ರೀನಿವಾಸ ಎನ್. ಟಿ ರವರು ಗುರುವಾರ ಭೇಟಿ ನೀಡಿ ಭಾರಿ ಮಳೆಯಿಂದ ಹಾನಿ ಗೊಳಗಾದ ಸ್ಥಳ ವೀಕ್ಷಣೆ ಮಾಡಿದರು. ನಂತರ ಸ್ಥಳೀಯರೊಂದಿಗೆ ಸಮಾಲೋಚಿಸಿದ ಶಾಸಕರು ಸಾರ್ವಜನಿಕರಿಗೆ ತೊಂದರೆ ಆಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಕೆರೆ ನೀರಿನಿಂದ ಮುಳುಗಡೆಯಾಗಿ ಹಾನಿಗೊಳಗಾದ ಮನೆಗಳ ಮಾಹಿತಿಯನ್ನು ಪಡೆದು ಅಗತ್ಯ ಪರಿಹಾರ ನೀಡುವಂತೆ ಹಾಗೂ ಶಾಶ್ವತ ಸಮಸ್ಯೆ ನಿವಾರಣೆಗೆ ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಿ ತ್ವರಿತ ಕ್ರಮ ವಹಿಸಲಾಗುವುದು ಜೊತೆಗೆ ಮನೆ ಹಾನಿಗೊಳಗಾದ ಕುಟುಂಬ ಗಳಿಗೆ ದಿನಸಿ ಪದಾರ್ಥಗಳಿಗಾಗಿ ವೈಯಕ್ತಿಕವಾಗಿ ಆರ್ಥಿಕ ಧನಸಹಾಯ ನೀಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ನರಸಪ್ಪ, ಗ್ರಾಪಂ ಅಭಿವೃದ್ಧಿ ಅಧಿಕಾರಿ ನಿಂಗಪ್ಪ, ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಊರಿನ ಪ್ರಮುಖ ಮುಖಂಡರು ಕಾರ್ಯಕರ್ತರು ಇತರರು ಇದ್ದರು.



# ಸರ್ಕಾರಿ ಅಧಿಕಾರಿಗಳಿಗೆ – ಆದಾಯ ತೆರಿಗೆ ಕಟ್ಟುವವರಿಗೆ ಬಿಪಿಎಲ್ ಕಾರ್ಡ್ ಕೊಡಬೇಕಾ?

## ಅದಾನಿಯನ್ನು ಏಕೆ ಬಂಧಿಸುತ್ತಿಲ್ಲ: ರಕ್ಷಿಸುತ್ತಿರುವವರು ಯಾರು: ಸಿ.ಎಂ.ಸಿದ್ದರಾಮಯ್ಯ

**■ ಹಂಪಿ ಟೈಮ್ಸ್ ಬೆಂಗಳೂರು**

ಅರೆಸ್ಟ್ ವಾರೆಂಟ್ ಬಂದಿದ್ದರೂ ಅದಾನಿಯನ್ನು ಏಕೆ ಬಂಧಿಸುತ್ತಿಲ್ಲ? ಅವರನ್ನು ರಕ್ಷಿಸುತ್ತಿರುವವರು ಯಾರು ಎಂದು ಪ್ರಶ್ನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಕ್ಷಣ ಅದಾನಿಯನ್ನು ಬಂಧಿಸಿ ತಪ್ಪಿಸಿಕೊಳ್ಳಲು ಬಿಡಬೇಡಿ ಎಂದು ಆಗ್ರಹಿಸಿದರು.



ಮೈಸೂರು ವಿಮಾನನಿಲ್ದಾಣದಲ್ಲಿ ಮಾಧ್ಯಮದವರ ಜೊತೆ ಶುಕ್ರವಾರ ಮಾತನಾಡಿದರು. ಅದಾನಿಯಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಘನತೆ ಪದೇ ಪದೇ ಹರಾಜಾಗುತ್ತಿದೆಯಲ್ಲವೇ ಎನ್ನುವ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಸಿಎಂ, ಅದಾನಿಗೆ ರಕ್ಷಣೆ ಕೊಡುತ್ತಿರುವವರು ಯಾರು ಎನ್ನುವುದು ದೇಶಕ್ಕೇ ಗೊತ್ತಿದೆ. ನಿಮಗೆ ಗೊತ್ತಿಲ್ವಾ? ಈ ಸತ್ಯವನ್ನು ಮಾಧ್ಯಮಗಳು ದೇಶದ ಜನರಿಗೆ ಏಕೆ ತೋರಿಸುತ್ತಿಲ್ಲ ಎಂದು ಪ್ರಶ್ನಿಸಿದರು.

ರಾಜ್ಯದ ರೈತರಿಗೆ ಕೇಂದ್ರ ಮಾಡಿದ ಅನ್ಯಾಯ ಸರಿಯಾ? ರೈತರಿಗೆ ರಿಯಾಯ್ತಿ ಬಡ್ಡಿ ದರದಲ್ಲಿ ಕೊಡುವ ಸಾಲದ ಮೊತ್ತವನ್ನು ನಬಾರ್ಡ್ ಈ ಬಾರಿ ಶೇ 58 ರಷ್ಟು ರಾಜ್ಯಕ್ಕೆ ಕಡಿತಗೊಳಿಸಿದೆ. ಇದು ರಾಜ್ಯದ ರೈತರಿಗೆ ಮಾಡಿದ ಪರಮ ಅನ್ಯಾಯ ಎಂದರು.

ಆದರೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿಯವರು ಈ ಅನ್ಯಾಯ ಸರಿ ಎಂದು ಹೇಳಿದ್ದಾರಲ್ಲಾ ಎನ್ನುವ ಪ್ರಶ್ನೆಗೆ ಉತ್ತರಿಸಿದ ಸಿಎಂ, ರಾಜ್ಯದ ರೈತರಿಗೆ ಕೇಂದ್ರ ಅನ್ಯಾಯ ನಾಡಿದ್ದು ಸರಿ ಎಂದು ಪ್ರಹ್ಲಾದ್ ಜೋಶಿ ಹೇಳಿದ್ದರೆ ಮಣ್ಣಿನ ಮಗ, ರೈತರ ಮಗ ಅಂದುಕೊಂಡಿರುವ ಹೆಚ್.ಡಿ. ಕುಮಾರಸ್ವಾಮಿಯವರು ಉಸಿರೇ ಬಿಡ್ತಿಲ್ಲವಲ್ಲ ಏಕೆ ಎಂದು ಪ್ರಶ್ನಿಸಿದರು.

ವರ್ಷದಿಂದ ವರ್ಷಕ್ಕೆ ನಬಾರ್ಡ್ ನಿಂದ ರಾಜ್ಯದ ರೈತರಿಗೆ ಕೊಡುವ ಸಾಲದ ಪ್ರಮಾಣ ಹೆಚ್ಚಾಗಬೇಕು. ಆದರೆ ಈ ಬಾರಿ ಕಡಿತಗೊಳಿಸಿದೆ.

ರೈತರಿಗೆ ಶೇ4.5 ಬಡ್ಡಿದರದಲ್ಲಿ ನಬಾರ್ಡ್ ರಾಜ್ಯದ ರೈತರಿಗೆ ಸಾಲ ಕೊಡುತ್ತದೆ. ಈ ಬಡ್ಡಿಯನ್ನು ರಾಜ್ಯ ಸರ್ಕಾರವೇ ಭರಿಸುತ್ತದೆ. ಆದರೆ ಈಗ ನಬಾರ್ಡ್ ಸಾಲದ ಪ್ರಮಾಣ ಕಡಿತಗೊಳಿಸಿರುವುದರಿಂದ ನಾವು ವಾಣಿಜ್ಯ ಬ್ಯಾಂಕ್ ಗಳ ಬಳಿ ಸಾಲಕ್ಕೆ ಹೋಗಿ ಶೇ10 ರಷ್ಟು ಬಡ್ಡಿ ಕಟ್ಟಬೇಕು. ಇದು ರಾಜ್ಯಕ್ಕೆ ಆಗುವ ನಷ್ಟ. ಇಷ್ಟು ದೊಡ್ಡ ಪ್ರಮಾಣದ ಅನ್ಯಾಯವನ್ನು ಜೋಶಿ ಸಮರ್ಥಿಸಿಕೊಂಡಿದ್ದಾರೆ. ರಾಜ್ಯದಿಂದಲೇ ಆಯ್ಕೆ ಆಗಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಈ ಅನ್ಯಾಯ ಸರಿ ಪಡಿಸಿ ಎಂದು ಮನವಿ ಕೊಟ್ಟಿದ್ದೇನೆ. ರಾಜ್ಯದ ರೈತರ ಬಗ್ಗೆ ಕಾಳಜಿ ಇದ್ದರೆ ಬಿಜೆಪಿ ಮತ್ತು ಕೇಂದ್ರ ಸರ್ಕಾರ ಅನ್ಯಾಯ ಸರಿಪಡಿಸಲಿ ಎಂದು ಸವಾಲು ಹಾಕಿದರು.

**ಆಹಾರ ಭದ್ರತಾ ಕಾಯ್ದೆ ನಮ್ಮದು- ವಿರೋಧಿಸಿದ್ದು ಮುರುಳಿ ಮನೋಹರ ಜೋಶಿ**

ಕೇಂದ್ರ ಸರ್ಕಾರವೇ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಿದೆ. ಈಗ ಅವರೇ ರಾಜ್ಯದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರಲ್ಲಾ ಎನ್ನುವ ಪತ್ರಕರ್ತರ ಪ್ರಶ್ನೆಗೆ ಆಕ್ರೋಶಗೊಂಡ ಸಿಎಂ, ಆಹಾರ ಭದ್ರತಾ ಕಾಯ್ದೆಯನ್ನು ಜಾರಿ ಮಾಡಿದ್ದು ಪ್ರಧಾನಿ ಮನಮೋಹನ್ ಸಿಂಗ್ ಅವರು. ಇದನ್ನು ಬಿಜೆಪಿ ವಿರೋಧಿಸಿತ್ತು. ಹಿಂದಿನ ಕೇಂದ್ರ ಸಚಿವರಾಗಿದ್ದ ಮುರಳಿ ಮನೋಹರ ಜೋಶಿಯವರು ಆಹಾರ ಭದ್ರತೆ ಕಾಯ್ದೆಯನ್ನು ವಿರೋಧಿಸಿದ್ದರು. ಈಗ ಅನ್ಯಾಯ ಅನ್ಯಾಯ ಅಂತ ಸುಳ್ ಸುಳ್ಳೇ ರಾಜ್ಯದ ಜನರ ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೊದಲಿಗೆ ರಾಜ್ಯದ ಜನರಿಗೆ ಏಳು ಕೆಜಿ ಅಕ್ಕಿ ಕೊಟ್ಟವರು ನಾವು. ಇದನ್ನು ಐದು ಕೆಜಿಗೆ ಇಳಿಸಿದ್ದು ಯಡಿಯೂರಪ್ಪ. ಈಗ ಯಡಿ ಯೂರಪ್ಪ ಅವರ ಮಗ ವಿಜಯೇಂದ್ರನಿಗೆ ಈ ಬಗ್ಗೆ ಮಾತಾಡಲು ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದರು. ಯಡಿಯೂರಪ್ಪ ಅಕ್ಕಿ ಪ್ರಮಾಣವನ್ನು ಐದು ಕೆಜಿಗೆ ಇಳಿಸಿದ್ದನ್ನು ಹತ್ತು ಕೆಜಿಗೆ ಏರಿಸಿದ್ದು ನಾವು. ಈ ಸತ್ಯ ರಾಜ್ಯದ ಜನರಿಗೆ ಗೊತ್ತಿದೆ ಎಂದರು.

### ಸರ್ಕಾರಿ ನೌಕರರಿಗೂ ಬಿಪಿಎಲ್ ಕಾರ್ಡ್ ಕೊಡಬೇಕಾ: ಸಿಎಂ ಪ್ರಶ್ನೆ

ಸರ್ಕಾರಿ ನೌಕರರಿಗೂ ಬಿಪಿಎಲ್ ಕಾರ್ಡ್ ಕೊಡಬೇಕಾ? ಆದಾಯ ತೆರಿಗೆ ಪಾವತಿಸುವವರಿಗೂ ಬಿಪಿಎಲ್ ಕಾರ್ಡ್ ಕೊಡಬೇಕಾ? ಏನ್ ಆರ್. ಅಶೋಕಾ ಫೋಟೋ ತೆಗೆಸಿಕೊಂಡಿದ್ದೇ ಕೊಂಡಿದ್ದು ಎಂದು ಲೇವಡಿ ಮಾಡಿದರು. ಸರ್ಕಾರಿ ನೌಕರರಿಗೆ, ಆದಾಯ ತೆರಿಗೆ ಪಾವತಿಸುವವರಿಗೆ ಬಿಪಿಎಲ್ ಕಾರ್ಡ್ ಕೊಡಬಾರದು ಅಂತ ನಿಯಮಾವಳಿ, ಗೈಡ್ ಲೈನ್ ರಚಿಸಿದ್ದೇ ಬಿಜೆಪಿ. ಈಗ ಇವರೇ ಪ್ರತಿಭನೆ ಅಂತ ಫೋಟೋ ತೆಗೆಸಿಕೊಳ್ತಾ ಇದಾರೆ ಎಂದು ಲೇವಡಿ ಮಾಡಿದರು.

**ನಿಮ್ಮ ಆತ್ಮೀಯರಿಗೆ ಹುಟ್ಟು ಹಬ್ಬದ ಶುಭಾಶಯಗಳು,**
**ಸಾಧಕರಿಗೆ ಅಭಿನಂದನೆಗಳು, ಪುಣ್ಯಸ್ಮರಣೆ ಜಾಹೀರಾತು ನೀಡಲು**
ಸಂಪರ್ಕಿಸಿ: ಮೊ: 9448633038 **Ads Starts from Rs.1000/-**

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಬಾಳಿಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ** **ಹಿಂದಿ**

### रोबोट

**I . अनुरूपता :**

1) गिल्लू : रेखाचित्र :: रोबोट : ------ ( **कहानी** )
2) सक्सेना परिवार का रोबोट : रोबोनिल :: शर्मा परिवार का रोबोट : ------- ( **रोबोदीप** )
3) सक्सेना परिवार का मालिक : धिरज सक्सेना :: रोबोट कंपनी का मालिक :------- ( **रोबोजीत** )
4) सक्सेना परिवार का मालिक : धिरज सक्सेना :: सक्सेना परिवार का नौकर : ----- ( **साधोराम** )

**II . एक वाक्य में उत्तर लिखिए ।**

5) धीरज सक्सेना किस कार्यालय में जा पहुँचे ?
धीरज सक्सेना ' **रोबोटोनिक्स कॉरपोरेशन** ' कार्यालय में जा पहुँचे |

6) वैज्ञानिक लेखक का नाम लिखिए |
वैज्ञानिक लेखक का नाम **आइजक आसिमोव है** |

7) रोबोनिल और रोबोदीप किससे मिलने गए ?
रोबोनिल और रोबोदीप **रोबोजीत से** मिलने गए |

8) शर्मा परिवार के कुत्ते का नाम क्या था ?
शर्मा परिवार के कुत्ते का नाम **झबरू** था |

**III.दो - तीन वाक्यों में उत्तर लिखिए |**

**9)** धीरज सक्सेना को बुद्धिमान रोबोट की जरुरत क्यो थी ?
उत्तर : धीरज सक्सेना के नाती-पोतो का होमवर्क कराने के लिए एवं वर्ड प्रोसेसर पर उनका काम सँभाललने के लिए धीरज सक्सेना को बुद्धिमान रोबोट की जरुरत थी |

**10)** रोबोनिल ने रोबोजीत को क्या समझाने की कोशिश की ?
**उत्तर :** रोबोनिल ने रोबोजीत को इस तरह समझाने की कोशिश की कि धीरज सक्सेना ने साधोराम को नौकरी से निकालकर रोबोट रख लिया है | यह रोबोटिकि के नियम के विरुद्ध है | इसलिए आपने धीरज सक्सेना से हुई अनुबंध को तोडकर साधोराम को दुबारा नौकरी दिलाना चाहिए |

**IV. तीन-चार वाक्यों में उत्तर लिखिए ।**

11.धीरज सक्सेना ने घरेलू कामकाज के लिए रोबोट रखने का निर्णय क्यो लिया ?
**उत्तर :** वर्षो से सक्सेना परिवार मे साधोराम नामक एक नौकर काम कर रहता था | अचानक एक दिन चलती बस से गिरकर उसे खतरनाक चोट आ गई | उसे अस्पताल में भर्ती करना पडा | सक्सेना परिवार बडा था | बेटे-बेटियो, नाती-पोतोम से घर में हमेशा रौनक और चहल-पहल बनी रहती | साधोराम के अस्पताल पहुँच जाने से सभी की तकलीफें बढ गई | धीरज सक्सेना से परिवारवालो का यह दु:ख नही देखा गया | तभी परिवार के मुखिया के नाते उन्होंने कोई फैसला करना किया | इसलिए धीरज सक्सेना ने घरेलू कामकाज के लिए रोबोट रखने का निर्णय लिया |

12. विज्ञान कथा का सार लिखिए |
**उत्तर :** एक घर में एक नौकर , किसी जानलेवा बीमारी से पीडित था, उसे निकालकर उसकी जगह पर एक रोबोट को रख दिया जाता है | किसी तरह रोबोट को इस बात की जानकारी मिल जाती है तो वह ' रोबोटिक संघ से संपर्क साधकर संघ को सारी बातो से अवगत कराता है | संघ रोबोटो की हडताल की घोषणा कर देता है | अंतत समझौता इस बात पर होता है कि उस नौकर को घर में फिर से रख लिया जायेगा |

---

**मुहावरें**

| | | |
|---|---|---|
| अँगूठा दिखाना | = | साफ इनकार करना |
| राहत की साँस लेना | = | चैन की साँस लेना |
| आस्तीन का साँप | = | कपटी मित्र |

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ**, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಕಾರ್ತಿಕ । ಸಂವತ್ಸರ: ಕ್ರೋಧಿ

**23-11-2024 – ಶನಿವಾರ**

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಮಾಘಾ |
| ಯೋಗ | : ಇಂದ್ರ |
| ಕರಣ | : ಬಾಳವ |
| ಸೂರ್ಯೋದಯ | : 06:47:20 |
| ಸೂರ್ಯಾಸ್ತ | : 17:39:23 |
| ರಾಹು ಕಾಲ | : 09:30-10:52 |
| ಯಮಘಂಡ ಕಾಲ | : 13:35-14:56 |
| ಗುಳಿಕ ಕಾಲ | : 06:47-08:09 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 22-11-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1630.59 ಅಡಿ |
| ಒಳ ಹರಿವು | 3223 ಕ್ಯುಸೆಕ್ |
| ಹೊರ ಹರಿವು | 6461 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 96.305 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1598.29 ಅಡಿ |
| ಒಳ ಹರಿವು | 674 ಕ್ಯುಸೆಕ್ |
| ಹೊರ ಹರಿವು | 9677 ಕ್ಯುಸೆಕ್ |
| ಸಾಮರ್ಥ್ಯ | 19.400 ಟಿಎಂಸಿ |

# ಎಪಿಎಂಸಿ ಸುಧಾರಣೆಗೆ ಕ್ರಮವಹಿಸಿ ಅಧಿಕಾರಿಗಳಿಗೆ ಶಾಸಕ ಖಡಕ್ ಸೂಚನೆ




■ **ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದ ಎಪಿಎಂಸಿ ಮಾರುಕಟ್ಟೆಯಲ್ಲಿ ನಡೆಯದ ವಹಿವಾಟು ಈಗಾಗಲೇ ಅನೇಕ ರೈತರ ಹಾಗೂ ಸಾರ್ವಜನಿಕರ ದೂರುಗಳು ಬಂದಿದ್ದು ಈ ದೂರುಗಳಆಧರಿಸಿಶಾಸಕಡಾ.ಎನ್.ಟಿ.ಶ್ರೀನಿವಾಸ್ ಗುರುವಾರ ಎಪಿಎಂಸಿ ಗೆ ಭೇಟಿ ನೀಡಿ ಎಪಿಎಂಸಿ ಕಾರ್ಯದರ್ಶಿ ಹಾಗೂ ರೈತರು, ವ್ಯಾಪರಸ್ಥರು ಸೇರಿದಂತೆ ಸಾರ್ವಜನಿಕರಿಂದ ಮಾಹಿತಿ ಪಡೆದರು. ಈ ಸಂಧರ್ಭದಲ್ಲಿ ಎಪಿಎಂಸಿ ಕಾರ್ಯದರ್ಶಿ ಬಸವರಾಜ ಮಾತನಾಡಿ, ಪೂರ್ಣಪ್ರಮಾಣದ ಎಪಿಎಂಸಿ ಪರಿವರ್ತನೆ ಆಗಿ ಎರಡು ವರ್ಷಗಳಾಗಿದ್ದು, ಈಗಾಗಲೇ ಪರವಾನಗಿ ಪಡೆದ ವರ್ತಕರು ಗೋದಾಮುಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಆದರೆ ಎಪಿಎಂಸಿ ಯಲ್ಲಿ ರೈತರ ಉತ್ಪನ್ನಗಳನ್ನು ಖರೀದಿಸಲು ಕಮೀಷನ್ ಏಜೆಂಟ್ ಗಳು ಬರಬೇಕು ಇಲ್ಲವಾದಲ್ಲಿ ಮಾರುಕಟ್ಟೆ ನಡೆಯುವುದು ಅಸಾಧ್ಯ ಎಂದರು.

ಇದಕ್ಕೆ ವರ್ತಕ ಶಿವಪುರ ರಾಜು ಮಾತನಾಡಿ, ಈಗಾಗಲೇ ಪಟ್ಟಣ ಸೇರಿದಂತೆ ಪಕ್ಕದ ಗ್ರಾಮಗಳ 43 ವರ್ತಕರು ಪರವಾನಿಗೆ ಪಡೆದಿದ್ದು ಆರಂಭದಲ್ಲಿ ನೀವು ನಮಗೆ ಕಮೀಷನ್ ಏಜೆಂಟ್ ಖರೀದಿದಾರು ಎಂದು ಪರವಾನಗಿ ನೀಡಿ ಇದರಿಂದ ನಾವುಗಳು ಮಾರುಕಟ್ಟೆಯಲ್ಲಿ ರೈತರ ಉತ್ಪನ್ನಗಳನ್ನು ಖರೀದಿಸುತ್ತೇವೆ. ನಂತರ ಹೊರಗಿನ ದೊಡ್ಡ ಕಮಿಷನ್ ಏಜೆಂಟ್ ಗಳು ಸಹಜವಾಗಿ ಬರುತ್ತಾರೆ. ಆಗ ದೊಡ್ಡ ಮಟ್ಟದ ವಹಿವಾಟು ನಡೆಯುತ್ತದೆ ಇದರಿಂದ ರೈತರ ಉತ್ಪನ್ನಗಳಿಗೆ ಹೆಚ್ಚಿನ ಧರ ಸಿಗುತ್ತದೆ ಎಂದರು. ನೇತ್ರಾವತಿ ಟ್ರೇಡರ್ಸ್ ಮಾಲೀಕ ರಂಗಾ ಶ್ರೀನಿವಾಸ್ ಮಾತನಾಡಿ, ಈಗಾಗಲೇ ಹೊರಗಿನ ದಲ್ಲಾಳಿಗಳು ಮಾರುಕಟ್ಟೆಗೆ ಮೂಲಕ ಖರೀದಿಸದೇ ಅನೇಕ ಗ್ರಾಮಗಳಲ್ಲಿ ಹೊರಗಡೆ ಖರೀದಿ ಮಾಡಿ ಶೂನ್ಯ ತೆರಿಗೆಯಲ್ಲಿ ಖರೀದಿ ಮಾಡಿ ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ ಮೊದಲು ಇದನ್ನು ತಡೆಗಟ್ಟಿ ಎಂದು ಶಾಸಕ ಎನ್.ಟಿ.ಶ್ರೀನಿವಾಸ್ ಹಾಗೂ ಎಪಿಎಂಸಿ ಕಾರ್ಯದರ್ಶಿ ಗಮನಕ್ಕೆ ತಂದರು. ಅಲ್ಲದೆ ಮಾರುಕಟ್ಟೆಯಲ್ಲಿ ವ್ಯವಹಾರ ನಡೆಯದ ಕಾರಣ ರೈತರಿಗೆ ವ್ಯಾಪರಸ್ಥರು ಕ್ವಿಂಟಲ್ ತೂಕಕ್ಕೆ 4 ಕೆಜಿ ಕಡಿತಮಾಡಿ ತೂಕ ಮಾಡುತ್ತಾರೆ. ಅಲ್ಲದೆ ಅವರ ಹಣಕ್ಕೆ ಶೇಕಡಾ ಎರಡರಷ್ಟು ಕಮೀಷನ್ ಪಡೆಯುತ್ತಾರೆ ಈಗಾದರೆ ರೈತರ ಗತಿ ಹೇಗೆ ಎಂದು ಕರವೇ ಅಧ್ಯಕ್ಷ ಕಾಟೇರ ಹಾಲೇಶ್ ಹಾಗೂ ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಚ್.ವೀರಣ್ಣ ಪ್ರಶ್ನೆ ಮಾಡಿದರು. ಆದ್ದರಿಂದ ಮಾರುಕಟ್ಟೆಯಲ್ಲಿಯೇ ಸರ್ಕಾರದ ಮಾರ್ಗಸೂಚಿ ಪ್ರಕಾರ ವಹಿವಾಟು ನಡೆಯಲಿ ಎಂದು ಪಟ್ಟು ಹಿಡಿದರು. ಇದಕ್ಕೆ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಮಾತನಾಡಿ, ಈಗಾಗಲೇ ಮಾರುಕಟ್ಟೆ ಕುರಿತು ಅನೇಕ ದೂರುಗಳು ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಎಪಿಎಂಸಿ ಕಾರ್ಯದರ್ಶಿ ಬಸವರಾಜ ಅವರಿಗೆ ಸೂಚನೆ ನೀಡಿ ಡಿ.5 ಒಳಗೆ ಇಲ್ಲಿನ ಪರವಾನಗಿ ವ್ಯಾಪಾರಸ್ಥರಿಗೆ ಕಮೀಷನ್ ಏಜೆಂಟ್ ಪರವಾನಗಿ ನೀಡಬೇಕು. ವ್ಯಾಪಾರಕ್ಕೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸಬೇಕು. ಎಪಿಎಂಸಿ ಆಡಳಿತ ಮಂಡಳಿಯನ್ನು ಸಹ ಸರ್ಕಾರದ ಮಟ್ಟದಲ್ಲಿ ನಾನು ಮಾತನಾಡುತ್ತೇನೆ. ಮೊದಲು ಎಪಿಎಂಸಿ ಗೋದಾಮಿನಲ್ಲಿ ಸಿಮೆಂಟ್ ಚೀಲಗಳ ಶೇಖರಣೆ ಮಾಡಿರುವ ದೂರುಗಳಿವೆ ಮೊದಲು ಅವುಗಳನ್ನು ಸ್ಥಳಾಂತರ ಮಾಡಿ ಇಲ್ಲವಾದಲ್ಲಿ ಸಹಿಸುವುದಿಲ್ಲ ಎಂದು ಎಚ್ಚರಿಕೆ ಗಡುವು ನೀಡಿದರು. ಸಂಭಂದಿಸಿದ ಸಚಿವರ ಗಮನಕ್ಕೆ ತಂದು ಮಾರುಕಟ್ಟೆ ಅಭಿವೃದ್ಧಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಲು ನಾನು ಸದಾ ಸಿದ್ದ, ಅಭಿವೃದ್ಧಿಗೆ ನನ್ನ ಸಂಪೂರ್ಣ ಸಹಕಾರ ಇರುವುದಾಗಿ ಸಭೆಯಲ್ಲಿ ಶಾಸಕರು ತಿಳಿಸಿದರು. ವರ್ತಕರಾದ ರಾಮಸ್ವಾಮಿ ಶೆಟ್ಟಿ, ಸಪ್ತಗಿರಿ ಶೆಟ್ಟಿ, ಸಾಸಲವಾಡ ವೀರಣ್ಣ, ಪ್ರಕಾಶ್, ಕಕ್ಕುಪ್ಪಿ ಷಣ್ಮುಖಪ್ಪ, ರೈತ ಸಂಘದ ರಾಜ್ಯಾಧ್ಯಕ್ಷ ದೇವರ ಮನಿ ಮಹೇಶ್, ಕಾಟೇರ ಶೇಷಪ್ಪ, ಮೊರಬದ ಭದ್ರಿ, ಬಣಕಾರ ವೀರಭದ್ರಪ್ಪ, ಮಲ್ಲಾಪುರ ರಾಘವೇಂದ್ರ ಇತರರಿದ್ದರು.

# ಯುವನಿಧಿ ಯೋಜನೆಗೆ ಅರ್ಹರು ನೋಂದಾಯಿಸಿಕೊಳ್ಳಲು ಮನವಿ

■ **ಹಂಪಿ ಟೈಮ್ಸ್ ಬಳ್ಳಾರಿ**

ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲೊಂದಾದ ಯುವನಿಧಿ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹರು ನೋಂದಾಯಿಸಿಕೊಳ್ಳುವಂತೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ಪಿ.ಎಸ್.ಹಟ್ಟಪ್ಪ ಅವರು ತಿಳಿಸಿದ್ದಾರೆ.

ಈ ಯೋಜನೆಯಡಿ ಪದವೀಧರರಿಗೆ ರೂ.3000 ಮತ್ತು ಡಿಪ್ಲೋಮಾ ಪದವೀಧರರಿಗೆ ರೂ.1500 ನೀಡಲಾಗುತ್ತದೆ. ಅರ್ಹರು ಸೇವಾ ಸಿಂಧು ಪೋರ್ಟಲ್, ಅಟಲ್ ಜೀ ಕೇಂದ್ರ, ಕರ್ನಾಟಕ-1, ಬಳ್ಳಾರಿ-1 ಮತ್ತು ಇತರೆ ಸೇವಾ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಿ ನೋಂದಣಿ ಮಾಡಿಕೊಳ್ಳಬಹುದು.

**ಅರ್ಹತೆ:** 2023-24 ನೇ ಸಾಲಿನಲ್ಲಿ ಪದವಿ, ಸ್ನಾತ್ತಕೋತ್ತರ ಅಥವಾ ಡಿಪ್ಲೋಮಾ ಉತ್ತೀರ್ಣರಾದ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ. ಪದವಿ, ಡಿಪ್ಲೋಮಾ ನಂತರ ಕನಿಷ್ಠ 6 ತಿಂಗಳ/180 ದಿನಗಳ ಅವಧಿಯವರೆಗೆ ಸರ್ಕಾರಿ, ಖಾಸಗಿ ಉದ್ಯೋಗ ಅಥವಾ ಸ್ವಯಂ ಉದ್ಯೋಗ ಹೊಂದಿಲ್ಲದವರಾಗಿರಬೇಕು. ಉನ್ನತ ವಿದ್ಯಾಭ್ಯಾಸ ಮುಂದುವರಿಸದೇ ಇರುವವರು ಅರ್ಹರು. ಕರ್ನಾಟಕದಲ್ಲಿ ವಾಸವಿರುವವರು (ಕನಿಷ್ಠ 6 ವರ್ಷಗಳವರೆಗೆ ಪದವಿ, ಡಿಪ್ಲೋಮಾ ಅಧ್ಯಯನ ಮಾಡಿದವರು).

**ಬೇಕಾದ ದಾಖಲೆ:** ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಅಥವಾ ಡಿಪ್ಲೋಮಾ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ಸಂಖ್ಯೆ, ಮೊಬೈಲ್ ನಂಬರ್. ಪ್ರತಿ ತಿಂಗಳು ಸ್ವಯಂ ದೃಢೀಕೃತ ನಿರುದ್ಯೋಗಿ ಪ್ರಮಾಣ ಪತ್ರವನ್ನು ಸೇವಾಸಿಂಧು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ ವಾಗಿದೆ. ತಪ್ಪು ಮಾಹಿತಿ ನೀಡಿದಲ್ಲಿ ದಂಡ ವಿಧಿಸಲಾಗುವುದು. ನೊಂದಾಯಿಸಿಕೊಳ್ಳಲು ಸೇವಾ ಸಿಂಧು ವೆಬ್ ಪೋರ್ಟಲ್ ವಿಳಾಸ: https://sevasindhugs.karnataka.gov.in ಗೆ ಭೇಟಿ ನೀಡಬೇಕು. ಹೆಚ್ಚಿನ ಮಾಹಿತಿಗಾಗಿ ನಗರದ ಹಳೆಯ ತಾಲ್ಲೂಕು ಕಚೇರಿ ಹಿಂಭಾಗದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ಮೊ: 9742718891, 8277000619, 9900827768, 6360408094, 8861866752 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ವಾಹನ ಸಂಚಾರ ಮಾರ್ಗ ಬದಲಾವಣೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ನಗರದ ಕನಕದುರ್ಗಮ್ಮ ದೇವಸ್ಥಾನ ಹತ್ತಿರದ ಕೆಳಸೇತುವೆಯ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುತ್ತಿದ್ದು, ಸಾರ್ವಜನಿಕ ಸಂಚಾರ ಸುರಕ್ಷತೆ ಹಿತದೃಷ್ಟಿಯಿಂದ ರಸ್ತೆಯಲ್ಲಿ ಸಾರ್ವಜನಿಕ ವಾಹನಗಳ ಸಂಚಾರವನ್ನು ಸ್ಥಗಿತಗೊಳಿಸಿ ಬೇರೆ ರಸ್ತೆಗಳ ಮೂಲಕ ವಾಹನಗಳ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದ್ದು, ಸಾರ್ವಜನಿಕರು ಸಹಕರಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ.ವಿ.ಜೆ ಅವರು ತಿಳಿಸಿದ್ದಾರೆ.

ಗಡಿಗಿ ಚೆನ್ನಪ್ಪ ವೃತ್ತದಿಂದ ದುರ್ಗಮ್ಮ ದೇವಸ್ಥಾನ ಕಡೆಗೆ ಹೋಗುವ ಲಘು ಮೋಟಾರು ವಾಹನಗಳು ಯು.ಬಿ.ಸರ್ಕಲ್, ಹಳೇಕೋರ್ಟ್ ರಸ್ತೆ, ಎಸ್.ಎನ್.ಪೇಟೆ (ಕೂಲ್ ಕಾರ್ನರ್) ವೃತ್ತ, ಎಸ್.ಎನ್.ಪೇಟೆ ಮೇಲ್ಸೇತುವೆಯ ಹಾಗೂ ಕೆಳಸೇತುವೆ, ಅಲ್ಲಂ ಸುಮಂಗಳಮ್ಮ ಮಹಿಳಾ ಕಾಲೇಜು ರಸ್ತೆ ಅಥವಾ ಗಾಂಧಿನಗರ ಮಾರ್ಕೆಟ್ ರಸ್ತೆಯ ಮೂಲಕ ಸಂಚರಿಸಬಹುದು.

# ಪ್ರೋತ್ಸಾಹಧನಕ್ಕೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

■ **ಹಂಪಿ ಟೈಮ್ಸ್ ಕೊಪ್ಪಳ**

ಭಾಗ್ಯನಗರ ಪಟ್ಟಣ ಪಂಚಾಯತಿ ವತಿಯಿಂದ 2023-24ನೇ ಸಾಲಿನ ಎಸ್.ಎಫ್.ಸಿ ಅನುದಾನದಲ್ಲಿ ಶೇ.24.10 ರ ಯೋಜನೆಯಲ್ಲಿ ಶೇ.40 ರಷ್ಟು ವ್ಯಕ್ತಿಗತ ಕಾರ್ಯಕ್ರಮದ ಯೋಜನೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿವಿಧ ಹಂತಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲು ಅರ್ಜಿ ಅಹ್ವಾನಿಸಲಾಗಿದ್ದು, ನಿಗದಿಪಡಿಸಿದ ಅರ್ಜಿಗಳು ಸ್ವೀಕೃತಿಯಾಗದ ಕಾರಣ ಅರ್ಜಿ ಸಲ್ಲಿಸುವ ಅವಧಿಯನ್ನು ನವೆಂಬರ್ 30ರವರೆಗೆ ವಿಸ್ತರಿಸಲಾಗಿದೆ. ಅರ್ಹ ಫಲಾನುಭವಿಗಳು ಅರ್ಜಿಯೊಂದಿಗೆ ಪ್ರಸ್ತುತ ವರ್ಷದ ವ್ಯಾಸಂಗ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಕುಟುಂಬದ ಪಡಿತರ ಚೀಟಿ, ಅಂಕಪಟ್ಟಿಗಳು, ಜಾತಿ, ಆದಾಯ ಪ್ರಮಾಣ ಪತ್ರದ ಝರಾಕ್ಸ್ ಪ್ರತಿಗಳು ಮತ್ತು 02 ಭಾವಚಿತ್ರಗಳನ್ನು ನವೆಂಬರ್ 30 ರೊಳಗಾಗಿ ಪ.ಪಂ. ಕಾರ್ಯಾಲಯಕ್ಕೆ ಸಲ್ಲಿಸಬೇಕು ಎಂದು ಪಟ್ಟಣ ಪಂಚಾಯತ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

